# ಅಪರಂಜಿ ಬಳಗದ ಅಂತಿಮ ನಮನ



## ಬಾಗೂರು ಚಂದ್ರು (ಬಿ.ಎಸ್. ಚಂದ್ರಶೇಖರ್)

## ಜೂನ್ 7, 1940 – ಜನವರಿ 20, 2011

ಕೊರವಂಜಿ ಅಪರಂಜಿ ಬಳಗದ ಬಾಗೂರು ನಮ್ಮ ನಡುವಿನ ಒಬ್ಬ ಕ್ರಿಯಾಶೀಲ ವ್ಯಕ್ತಿ. ಅಪರಂಜಿಯಲ್ಲಿ ಅವರ ಅಂಕಣ ವಿದ್ಯಮಾನಗಳು ಬಹು ಜನಪ್ರಿಯವಾಗಿತ್ತು. ಅವರ ಇತ್ತೀಚಿನ ಕೃತಿ: ಬೆಸ್ಟ್ ಆಫ್ ಬಾಗೂರು ಮತ್ತು ಅವರೇ ಸಂಪಾದಿಸಿದ ಶತಮಾನದ ನಗೆಬರಹಗಳು. ಎರಡು ಬಾರಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ ಬಾಗೂರು ಬಹಳ ಸ್ನೇಹ ಪ್ರಿಯ ವ್ಯಕ್ತಿ, ಮಿತಭಾಷಿ.

ಹಾಸ್ಯೋತ್ಸವದ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಬೇಕೆಂದಾಗ ಬಹು ಸಂಕೋಚದಿಂದಲೇ ಒಪ್ಪಿಕೊಂಡರು. ಅಪರಂಜಿಯ ಜನಪ್ರಿಯತೆಗೆ ಬಾಗೂರರ ಕಾಣಿಕೆ ಅಪಾರ. ನಮ್ಮ ಸಂಪಾದಕೀಯ ಮಂಡಳಿಯ ಸಭೆಗಳಲ್ಲಿ ಭಾಗವಹಿಸಿ ಉಪಯುಕ್ತ ಸಲಹೆಗಳನ್ನು ಕೊಟ್ಟು ಅಪರಂಜಿಯ ಏಳಿಗೆಗೆ ಶ್ರಮಿಸಿದವರು. 70 ಸಾಯುವ ವಯಸ್ಸಲ್ಲ ಆದರೆ ಕಾಲನ ಕರೆಗೆ ಓಗೊಡಲೇಬೇಕಲ್ಲ. ಇತ್ತೀಚೆಗೆ ಬಾಗೂರು ತುಸು ಅನಾರೋಗ್ಯದಿಂದ ಬಳಲುತ್ತಿದ್ದರು. ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಭಗವಂತ ಕರುಣಿಸಲಿ ಎಂದು ಅಪರಂಜಿ ನಡುಬಾಗಿ ಆಶಿಸಿ, ಅವರು ನಮ್ಮೊಡನಿದ್ದ ಕ್ಷಣಗಳನ್ನು ಸದಾ ಸ್ಮರಿಸುತ್ತಿರುತ್ತೇವೆ.

# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 28
ಸಂಚಿಕೆ - 5
ಫೆಬ್ರವರಿ - 2011

**ಸಂಪಾದಕ ಮಂಡಳಿ**
ಶ್ರೀ ಎಂ. ಶಿವಕುಮಾರ್
*ಸಂಪಾದಕರು*
ಶ್ರೀ ಬೇಲೂರು ರಾಮಮೂರ್ತಿ
*ಉಪ ಸಂಪಾದಕರು*
ಶ್ರೀ ಬಾಗೂರು ಚಂದ್ರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್‌ಟೆಕ್

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 3 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 4 |
| ಅವರೇಕಾಯಿ.... | ಅರುಂಧತಿ ಜೋಶಿ | 8 |
| ವಾರೆನೋಟ | ವಸುಧೇಂದ್ರ | 12 |
| ಒಂದು ಲೋನಿನ.. | ವಾಣಿ ಸುರೇಶ್ | 13 |
| ಹುರುಳಿಕಾಯಿ | ಪ್ರೇಮಾ ಭಟ್ | 17 |
| ಮೊನಾಲಿಸಾ | ಹ.ನ. ವೇಣುಗೋಪಾಲ | 19 |
| ತುಂತುರು | ದಂನಅ | 20 |
| ಹೀಗಾಗಿದ್ದು... | ಬೇಲೂರು ರಾಮಮೂರ್ತಿ | 21 |
| ಸಿಂಥೆಟಿಕ್ ಸೆಗಣಿಗೆ.. | ನಾಗೇಶ ಹೆಗಡೆ | 22 |
| ಹುರುಳಿಕಟ್ಟು | ಎಚ್. ಗೋಪಾಲಕೃಷ್ಣ | 25 |
| ಊರುಗೋಲು | ಶಿ. ನರಸಿಂಹಮೂರ್ತಿ | 27 |
| ಮಿಲ್ಕ್.... | ಗುರು | 29 |
| ಗಂಡಸರನ್ನು... | ಡಾ|| ಪಿ.ಎಸ್. ರಾಮಾನುಜಂ | 32 |
| ಸಮವಸ್ತ್ರ.... | ಇಸ್ಮಾಯಿಲ್ | 36 |

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: brmurthy@dataone.in

# ಅಪರಂಜಿ ಕಿಡಿ

● ಪ್ರಕಾಶ್



ಪಾಕೀಸ್ತಾನದ ಈರುಳ್ಳಿ ಹೆಚ್ಚಿದರೆ ಕಣ್ಣೀರು ಬರೊಲ್ಲವಂತೆ – ಸುದ್ದಿ

**● ಹೌದು, ಆ ದೇಶದ ಕಣ್ಣೀರೆಲ್ಲ ಇಂಗಿಹೋಗಿದೆ !!**

★★★

ಎ. ರಾಜಾ ಅವರಿಗೂ 'ಕರುಣಾ – ನಿಧಿ'ಗೂ
ಸಂಬಂಧ ಇಲ್ಲವಂತೆ ?!!

★★★

'ಯುವಕರು ರಾಜಕೀಯ ಪ್ರವೇಶಿಸಲಿ' – ಹೇಳಿಕೆ

**● ಯಾವ ಬಾಗಿಲಿಂದ ??!**

★★★

''ಸದನದಲ್ಲಿ ಗೋವಿಂದಾ.. ಗೋವಿಂದಾ'' – ಪತ್ರಿಕೆ

**● ಭಗವಂತ ನಸುನಕ್ಕನಂತೆ !!**

★★★

'ಕನ್ನಡ ನುಡಿತೇರು' ಜಾಗೃತಿ ಜಾಥಾಕ್ಕೆ ಅದ್ದೂರಿ ಚಾಲನೆ – ಸುದ್ದಿ

**● ಅಂಗಂದ್ರೆ ಏನ್ ಸಾರ್ ??**

★★★

ಪರಪ್ಪನ ಅಗ್ರಹಾರದಲ್ಲಿ 'ಸತ್ಯ ಹರಿಶ್ಚಂದ್ರ' ನಾಟಕ !!

**● ಟೀಕೆ ಅನಗತ್ಯ !!**

★★★

ರಾಜ್ಯಪಾಲರಿಂದಲೇ ಕಡತ ಪರಿಶೀಲನೆ – ಸುದ್ದಿ

**● 'ಭಾರ' ಯಾವ ಕಡೆ ವಾಲುತ್ತೋ ಕಾದು ನೋಡಬೇಕು !!**

★★★

ನಿಮ್ಮ ಜನ್ಮರಾಶಿ ಅದಲು ಬದಲು – ಅಮೆರಿಕಾ ಸುದ್ದಿ


**● ತಾರಾಬಲ ಏನಾಗುತ್ತೋ ಕಾದು ನೋಡಬೇಕು !!**

★★★

# ನಮ್ಮ ನಿಮ್ಮಲ್ಲಿ

**ಗೆ**ಳೆಯ ಪ್ರಕಾಶ್ ಕಂಬತ್ತಳ್ಳಿ ಒಂದು ಎದೆಗಾರಿಕೆಯ ಕೆಲಸವನ್ನು ಮಾಡಿದ್ದಾರೆ. ಇದಕ್ಕಾಗಿ ಅವರಿಗೆ ಕಾಮಧೇನುವಿಗೆ ಸದೃಶವಾದ ಒಂದು ಸಾವಿರ ಗೋವುಗಳನ್ನೂ ಚೆನ್ನಾಗಿ ಅಲಂಕರಿಸಿದ ಉಚ್ಚೈಶ್ರವಸ್ಸನ್ನು ಹೋಲುವ ನೂರು ಬಿಳಿಯ ಕುದುರೆಗಳನ್ನೂ ಉಡುಗೊರೆಯಾಗಿ ಕೊಟ್ಟರೂ ಹೆಚ್ಚು ಅನಿಸಲಾರದು. ಏನಪ್ಪಾ ಈ ಎದೆಗಾರಿಕೆಯ ಕೆಲಸ ಅಂತ ನೀವು ಕೇಳಬಹುದು. ಹೇಳುತ್ತೇನೆ ಕೇಳಿ. ಬಹು ಹಿಂದೆ ರಾ.ಶಿ.ಯವರು ''ಕಾಲ'' ಎಂಬ ಒಂದು ಗಂಭೀರ ವಿಷಯದ ಮೇಲೆ, ಕ್ಲಿಷ್ಟ ಎನ್ನಬಹುದಾದ ಗ್ರಂಥವೊಂದನ್ನು ಬರೆದರು. ಈ ಪುಸ್ತಕವನ್ನು ಪುನರ್ಮುದ್ರಿಸುವ ಆಲೋಚನೆ ಪ್ರಕಾಶ್‌ಗೆ ಬಂದು ಅವರು ಹಲವು ತಿಂಗಳುಗಳ ಹಿಂದೆ ನನ್ನ ಅನುಮತಿ ಕೇಳಿದ್ದರು. ಕನ್ನಡ ಪುಸ್ತಕಗಳನ್ನು ಓದುವವರ ಸಂಖ್ಯೆಯೇ ನಶಿಸುತ್ತಿರುವಾಗ ಇಂತಹ ವೈಜ್ಞಾನಿಕ – ಆಧ್ಯಾತ್ಮಿಕ ಪುಸ್ತಕಗಳನ್ನು ಯಾರು ಓದುತ್ತಾರೆ, ವೃಥಾ ಶ್ರಮಪಡಬೇಡಿ, ಅಂತ ನಾನು ಹಿತವಚನ ನೀಡಿದರೂ ಕೇಳದೆ, ಪ್ರಕಾಶ್ ಈ ಸಾಹಸಕ್ಕೆ ಕೈ ಹಾಕಿದ್ದಾರೆ. ಎದೆಗಾರಿಕೆಗೆ ಇದೊಂದು ಉತ್ತಮ ನಿದರ್ಶನ ಎಂಬುದು ನನ್ನ ಅನಿಸಿಕೆ. ಇರಲಿ. ಪುಸ್ತಕದ ಕರಡನ್ನು ಓದಿ ತಿದ್ದುವ ಜವಾಬ್ದಾರಿ ನನ್ನ ಹೆಗಲಿಗೆ ಬಂತು. ತಿದ್ದಿದ ಕರಡನ್ನು ಹಿಂತಿರುಗಿಸಲು ಗಾಂಧಿಬಜಾರಿನಲ್ಲಿರುವ ಅಂಕಿತ ಪುಸ್ತಕ ಮಳಿಗೆಗೆ ಹೋಗಿದ್ದೆ. ಪುಸ್ತಕಗಳನ್ನು ಹರಡಿದ್ದ ಉದ್ದನೆಯ ಮೇಜಿನ ಹಿಂದೆ ನಿಂತಿದ್ದ ಪ್ರಕಾಶ್ ನನ್ನನ್ನು ಆದರದಿಂದ ಬರಮಾಡಿಕೊಂಡರು. ಕರಡು ಪ್ರತಿಯ ವಿಲೇವಾರಿ ಆದನಂತರ, ಅವರು ತರಿಸಿಕೊಟ್ಟ ಟೀ ಕುಡಿಯುತ್ತಾ, ಮುಂದೆ ಮೇಜಿನ ಮೇಲೆ ಹರಡಿದ್ದ ಹೊಸ ಪುಸ್ತಕಗಳ ಮೇಲೆ ಹಾಗೇ ಕಣ್ಣಾಡಿಸಿದೆ. ಆಗ ಕಣ್ಣಿಗೆ ಬಿದ್ದ ಪುಸ್ತಕ ಫಕೀರ್ ಮಹಮ್ಮದ್ ಕಟ್ಪಾಡಿ ಅವರು ಬರೆದಿರುವ ''ಸೂಫಿ ಸಂತರು'' ಎಂಬ ಪುಸ್ತಕ. ಮುಲ್ಲಾ ನಸರುದ್ದೀನನ ಕತೆಗಳಲ್ಲಿ ಹಲವನ್ನು ಓದಿರುವುದನ್ನು ಬಿಟ್ಟರೆ ಸೂಫಿಗಳ ಬಗ್ಗೆ ನನಗೆ ಹೆಚ್ಚೇನೂ ತಿಳಿಯದು. ಟರ್ಕಿ ದೇಶದ ''ವ್ಹರ್ಲಿಂಗ್ ಡೆರ್ವಿಷಸ್'' ಎಂಬ ನರ್ತಿಸುವ ಸನ್ಯಾಸಿಗಳು, ಮಾದಕವಾದ ಸಂಗೀತಕ್ಕೆ ಲಯಬದ್ಧವಾಗಿ ತಿರುಗುತ್ತ ತಿರುಗುತ್ತ ಆಧ್ಯಾತ್ಮ ದರ್ಶನದ ಉತ್ತುಂಗ ಹಂತವನ್ನು ತುಲುಪುವುದರ ಬಗ್ಗೆ ಕೇಳಿದ್ದೇನೆ. ಸಂಪ್ರದಾಯವಾದಿ ಇಸ್ಲಾಮ್ ಧರ್ಮದಲ್ಲಿದ್ದುಕೊಂಡೂ ಆಧ್ಯಾತ್ಮದ ಹಾದಿಯನ್ನು ಸ್ವತಂತ್ರವಾಗಿ ಅರಸಲು ಸಾಧ್ಯ ಎಂಬುದನ್ನು ಶತ ಶತಮಾನಗಳಿಂದ ಸೂಫಿ ಸಂತರು ತಮ್ಮ ತಪಸ್ ಸದೃಶವಾದ ಜೀವನಕ್ರಮದಿಂದ ತೋರಿಸಿರುವ ಸಂಗತಿ ಸ್ವಲ್ಪ ಮಟ್ಟಿಗೆ ನನಗೆ ತಿಳಿದಿತ್ತು. ಈ ಪುಸ್ತಕದ ಮೊದಲ ಅಧ್ಯಾಯವೇ ಭಾರತಕ್ಕೆ ಬಂದು ನೆಲೆಸಿದ ಅಜ್ಮೀರಿನ ಖ್ವಾಜಾ ಮೊಯಿನುದ್ದೀನ್ ಚಿಸ್ತಿಯವರನ್ನು ಕುರಿತದ್ದು ಎಂಬುದನ್ನು ನೋಡಿದ ಮೇಲೆ ಅವರ ಬಗ್ಗೆ ಹೆಚ್ಚು ತಿಳಿಯುವ ಉದ್ದೇಶದಿಂದ ಪುಸ್ತಕವನ್ನು ಕೊಂಡು ಮನೆಗೆ ಬಂದೆ. ಪುಸ್ತಕದ ಅಂಗಡಿಗೆ ಹೋದಮೇಲೆ ಬರಿಗೈಯ್ಯಲ್ಲಿ ಹಿಂತಿರುಗಬಾರದಲ್ಲ.

ಒಂದೇ ಸಿಟ್ಟಿಂಗ್‌ನಲ್ಲಿ ಪುಸ್ತಕ ಓದಿ ಮುಗಿಸಿದೆ. ಭಾರತಕ್ಕೆ ವಲಸೆ ಬಂದ ಹಲವು ಸೂಫಿಗಳೇ ಅಲ್ಲದೇ ಇಂದಿನ ಇರಾನ್ ಮತ್ತು ಇರಾಕ್ ದೇಶಗಳಲ್ಲಿ ಜೀವಿಸಿ ಅಲ್ಲಿನ ಜನಜೀವನವನ್ನು ಬೆಳಗಿದ ಇಪ್ಪತ್ತೈದು ಪುಣ್ಯ ಜೀವಿಗಳ ಕತೆಗಳನ್ನು ಬಹು ಆಸಕ್ತಿ ಮೂಡಿಸುವಂತೆ ಕಟ್ಪಾಡಿಯವರು ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಇದರಲ್ಲಿ ಒಂದು ಕಥೆ, ಪರ್ಶಿಯಾ(ಇಂದಿನ ಇರಾನ್)ನಲ್ಲಿ ಜನಿಸಿ ಜೀವಿಸಿದ್ದ ಸೂಫಿ ಸಂತ ಅಲ್ – ತಿರ್‌ಮಿಧಿ ಇವರನ್ನು ಕುರಿತದ್ದು. ಮನುಷ್ಯನೊಳಗಿರುವ ಸೈತಾನನ ಬಗ್ಗೆ ತಿರ್‌ಮಿಧಿ ಅವರು ಕೊಟ್ಟಿರುವ ದೃಷ್ಟಾಂತದ ಕಥೆ ನಿಜಕ್ಕೂ ಚೆನ್ನಾಗಿದೆ ಅನ್ನಿಸಿತು. ಅದನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ.




ಯೇಸುವಿನ ಅನುಯಾಯಿಗಳು ಆಡಮ್ ಮತ್ತು ಈವ್ ಎಂದು ಮೊಟ್ಟಮೊದಲ ಪುರುಷ ಹಾಗೂ ಮಹಿಳೆಯನ್ನು ಗುರುತಿಸುವ ಹಾಗೆ ಇಸ್ಲಾಮ್ ಮತದಲ್ಲಿ ಮೊದಲ ಪುರುಷ ಹಾಗೂ ಮಹಿಳೆಯನ್ನು ಆದಮ್ ಮತ್ತು ಹವ್ವಾ ಎಂದು ಕರೆಯುತ್ತಾರೆ. ಆದಮ್ ಮತ್ತು ಹವ್ವಾ ಅವರು ಮಾಡಿದ ಒಂದು ತಪ್ಪಿಗೆ ಪ್ರಾಯಶ್ಚಿತ್ತವಾಗಿ ದೇವರು ಅವರಿಬ್ಬರನ್ನು ಭೂಮಿಗೆ ಕಳುಹಿಸುತ್ತಾರೆ. ಇಬ್ಬರೂ ತಮ್ಮ ತಪ್ಪಿಗಾಗಿ ಪಶ್ಚಾತ್ತಾಪಪಟ್ಟು ದೇವರಲ್ಲಿ ಕ್ಷಮೆಯನ್ನು ಯಾಚಿಸಿದಾಗ ಅವರಿಗೆ ಕ್ಷಮಾಪಣೆ ದೊರೆಯುತ್ತದೆ. ಒಂದು ದಿನ ಆದಮ್ ತನ್ನ ಕೆಲಸ ಕಾರ್ಯದ ನಿಮಿತ್ತ ಹವ್ವಾಳನ್ನು ಬಿಟ್ಟು ಹೊರಗೆ ಹೋಗಿದ್ದಾಗ ಸೈತಾನ ತನ್ನ ಮಗು ಖನ್ನಾಸನನ್ನು ಕರೆದುಕೊಂಡು ಹವ್ವಾಳ ಬಳಿ ಬಂದ.

''ನನಗೆ ತುರ್ತಾದ ಸ್ವಲ್ಪ ಕೆಲಸವಿದೆ. ಹೊರಗೆ ಹೋಗುತ್ತಿದ್ದೇನೆ. ದಯವಿಟ್ಟು ನನ್ನ ಮಗುವನ್ನು ನಾನು ಹಿಂತಿರುಗಿ ಬರುವವರೆಗೆ ಸ್ವಲ್ಪ ನೋಡಿಕೊಳ್ಳುತ್ತೀಯಾ?'' ಎಂದ.

ತಾಯಿಯ ಮನಸ್ಸಿನ ಹವ್ವಾ ಒಪ್ಪಿದಳು. ಸೈತಾನ ಅಲ್ಲಿಂದ ಹೊರಟ.

ಆದಮ್ ತನ್ನ ಕೆಲಸಗಳನ್ನು ಮುಗಿಸಿ ಹಿಂದಕ್ಕೆ ಬಂದವನು ಮಗುವನ್ನು ಕಂಡು ''ಇದು ಯಾರ ಮಗು?'' ಎಂದು ತನ್ನ ಪತ್ನಿಯನ್ನು ಕೇಳಿದ.

''ಇದು ಸೈತಾನನ ಮಗು. ಸ್ವಲ್ಪ ನೋಡಿಕೋ ಎಂದು ಬಿಟ್ಟು ಹೋದ'' ಎನ್ನುತ್ತಾಳೆ ಹವ್ವಾ.

ಇದನ್ನು ಕೇಳಿ ಸಿಟ್ಟಾದ ಆದಮ್, ''ನೀನ್ಯಾಕೆ ಒಪ್ಪಿಕೊಂಡೆ?'' ಎಂದು ಕೇಳಿ, ಸಿಟ್ಟಿನ

ಭರದಲ್ಲಿ ಸೈತಾನನ ಮಗುವನ್ನು ಕೊಂದು, ತುಂಡು ತುಂಡು ಮಾಡಿ ಎಸೆದು ಬಿಟ್ಟು ಅಲ್ಲಿಂದ ಹೊರಟು ಹೋದ.

ಸೈತಾನ ಮರುದಿನ ಹಿಂತಿರುಗಿ ಬಂದವನು ಹವ್ವಾಳನ್ನು ತನ್ನ ಮಗುವೆಲ್ಲಿ ಎಂದು ಕೇಳಿದ. ಹವ್ವಾ ನಡೆದ ಸಂಗತಿಯನ್ನು ತಿಳಿಸಿದಳು.

ಸೈತಾನ ತನ್ನ ಮಗುವನ್ನು ಹೆಸರು ಹಿಡಿದು ಕರೆದ. ಮಗುವಿನ ದೇಹ ಮತ್ತೆ ಜೋಡಿಸಲ್ಪಟ್ಟು ಜೀವಂತವಾಗಿ ಹಿಂತಿರುಗಿತು.

ಸ್ವಲ್ಪ ಹೊತ್ತಿನಲ್ಲೇ ಸೈತಾನ ಮತ್ತೆ ಹವ್ವಾಳ ಬಳಿ ಬಂದು, ತನಗೆ ಜರೂರು ಕೆಲಸವಿದೆ, ಮಗುವನ್ನು ಸ್ವಲ್ಪ ನೋಡಿಕೊಳ್ಳಿ ಎಂದು ಕೇಳಿದ. ಹವ್ವಾ ಈ ಬಾರಿ, ''ನನ್ನಿಂದಾಗದು'' ಎಂದು ಹೇಳಿದಳು. ಸೈತಾನ ಒತ್ತಾಯ ಮಾಡಿ ಅವಳನ್ನು ಒಪ್ಪಿಸಿದ.

ಆದಮ್ ಹಿಂತಿರುಗಿ ಬಂದು ನೋಡುವಾಗ ಮತ್ತೆ ಮಗುವನ್ನು ಕಂಡು ಸಿಟ್ಟಾದ. ''ಯಾಕೆ ಹೀಗೆ ಮಾಡಿದೆ?'' ಅಂತ ಪತ್ನಿಯನ್ನು ಕೇಳಿದ. ಅವಳು

ಸೈತಾನ ಒತ್ತಾಯ ಮಾಡಿದ್ದನ್ನು ಹೇಳಿದಳು.

''ನೀನು ಮತ್ತೆ ಮತ್ತೆ ಯಾಕೆ ಹೀಗೆ ತಪ್ಪು ಮಾಡುತ್ತೀಯೋ ತಿಳಿಯದು. ನನ್ನ ಮಾತಿಗೆ ತಪ್ಪುತ್ತಿದ್ದೀಯಾ, ದೇವರ ವೈರಿಯ ಮಾತನ್ನು ಕೇಳುತ್ತಿದ್ದೀಯಾ. ಸೈತಾನನ ಮಾತಿಗೆ ಮರುಳಾಗಿದ್ದೀಯ ನೀನು'' ಎಂದು ಸಿಟ್ಟಾಗಿ ಮಗುವನ್ನು ಕೊಂದು ಶವವನ್ನು ಸುಟ್ಟು ಬೂದಿಯನ್ನು ಗಾಳಿಗೆ ತೂರಿ ಹೇಳ ಹೆಸರಿಲ್ಲದಂತೆ ಮಾಡಿದ.


ಮರುದಿನ ಆದಮ್ ಹೊರಗೆ ಹೋದ ಹೊತ್ತಿನಲ್ಲಿ ಮತ್ತೆ ಸೈತಾನ ಹವ್ವಾಳ ಎದುರು ಪ್ರತ್ಯಕ್ಷನಾದ. ತನ್ನ ಮಗುವಿನ ಬಗ್ಗೆ ಕೇಳಿದ. ಹವ್ವಾ ನಡೆದುದನ್ನು ವಿವರಿಸಿ ಹೇಳಿದಳು. ಸೈತಾನ ಸ್ವಲ್ಪವೂ ವಿಚಲಿತನಾಗದೇ ಮತ್ತೆ ತನ್ನ ಮಗುವನ್ನು ಕರೆದ. ಮಗು ಜೀವಂತವಾಗಿ ಮುಂದೆ ನಿಂತಿತು.

ಮೂರನೆಯ ಬಾರಿ ಸೈತಾನ ತನ್ನ ಮಗುವನ್ನು ಇನ್ನೊಂದು ದಿನದ ಮಟ್ಟಿಗೆ ನೋಡಿಕೋ ಎಂದು ಹವ್ವಾಳನ್ನು ಬೇಡಿಕೊಂಡ. ಹವ್ವಾ, ತನ್ನಿಂದ ಸಾಧ್ಯವೇ ಇಲ್ಲ, ಆದಮ್ ನನ್ನನ್ನು ಕೊಂದೇ ಹಾಕುತ್ತಾನೆ ಎದು ಹೇಳಿದಳು. ಈ ಸಲ ಮಗುವನ್ನು ಒಂದು ಕುರಿಯ ರೂಪಕ್ಕೆ ತಿರುಗಿಸಿ ಇದನ್ನು ನೋಡಿಕೋ. ನಿನ್ನ ಗಂಡನಿಗೆ ತಿಳಿಯುವುದಿಲ್ಲ ಎಂದು ಪರಿಪರಿಯಾಗಿ ಬೇಡಿಕೊಂಡಾಗ ಹವ್ವಾ ವಿಧಿಯಿಲ್ಲದೇ ಒಪ್ಪಿಕೊಂಡಳು.

ಆದಮ್ ಹಿಂತಿರುಗಿ ಬಂದಾಗ ಕುರಿಮರಿಯನ್ನು ಕಂಡು ಇದೇನು ಎಂದು ಹವ್ವಾಳನ್ನು ಕೇಳಿದ. ಹವ್ವಾ ನಿಜ ಸಂಗತಿಯನ್ನು ತಿಳಿಸಿದಳು.

''ಅಲ್ಲ, ನಿನಗೆ ಏನಾಗಿಬಿಟ್ಟಿದೆ ಅಂತ ನನಗೆ ಗೊತ್ತಾಗ್ತಾ ಇಲ್ಲ. ನೀನು ನನ್ನ ಮಾತು ಕೇಳದೇ ಮತ್ತೆ ಮತ್ತೆ ಸೈತಾನನ ಮಾತನ್ನೇ ಕೇಳುತ್ತಿದ್ದೀಯಾ.'' ಎನ್ನುತ್ತಾ ಸಿಟ್ಟಾದ ಆದಮ್, ಕುರಿಯ ರೂಪದಲ್ಲಿದ್ದ ಸೈತಾನನ ಮಗ ಖನ್ನಾಸನನ್ನು ಕಡಿದು ಬೇಯಿಸಿ, ಅರ್ಧ ಆದಮ್ ತಿಂದ, ಇನ್ನರ್ಧ ಹವ್ವಾ ತಿಂದಳು.

ಹಿಂತಿರುಗಿದ ಸೈತಾನ ಇವರನ್ನು ನೋಡಿ ಗಹಗಹಿಸಿ ನಕ್ಕು ಹೇಳಿದ. ''ಆಹಾ, ನನ್ನ ಉದ್ದೇಶ ಫಲಿಸಿತು. ಹೇಗಾದರೂ ಮಾಡಿ ನಿಮ್ಮಿಬ್ಬರಲ್ಲೂ ಸೇರಿಕೊಳ್ಳುವ ಆಶೆ ಇತ್ತು. ಅದೀಗ ಪೂರೈಸಿತು. ನಿಮ್ಮಿಬ್ಬರೊಳಗೂ ಗಟ್ಟಿಯಾಗಿ ನೆಲಸುವುದಕ್ಕೆ ನಾನು ಕಾಯುತ್ತಿದ್ದ ಅವಕಾಶ ಸಿಕ್ಕಿತು'' ಎಂದು ಹೇಳಿ ಸೈತಾನ ಮಾಯವಾದನಂತೆ.



**ಸಾಮರ್ಸೆಟ್ ಮಾಮ್**

ಇದನ್ನು ಓದಿದಾಗ ತನ್ನ ರೇಸರ್ಸ್ ಎಡ್ಜ್ ಪುಸ್ತಕದಲ್ಲಿ ಸಾಮರ್ಸೆಟ್ ಮಾಮ್ ತಿರುಚಿ ಹೇಳಿರುವ ಬೈಬಲ್ ಕಥೆಯೊಂದು ನೆನಪಿಗೆ ಬಂತು. ಜೀಸಸ್ ಒಮ್ಮೆ ನಿರ್ಜನ ಪ್ರದೇಶವೊಂದರಲ್ಲಿ ನಲವತ್ತು ದಿನಗಳ ಕಾಲ ಉಪವಾಸ ವ್ರತವನ್ನು ಕೈಗೊಂಡಿದ್ದಾಗ ಅವನ ತಪಸ್ಸನ್ನು ಕೆಡಿಸಲು ಸೈತಾನ ಅವನ ಬಳಿ ಬಂದು, ನೀನು ದೇವರ ಮಗನೇ ಆಗಿದ್ದರೆ ಇಲ್ಲಿರುವ ಕಲ್ಲುಗ್ಗಳನ್ನೆಲ್ಲಾ ಬ್ರೆಡ್ಡಿನ ತುಣುಕುಗಳನ್ನಾಗಿ ಮಾಡು ಎಂದು ಸವಾಲು ಹಾಕಿದನಂತೆ. ಜೀಸಸ್ ಶಾಂತನಾಗಿ ಸುಮ್ಮನಿದ್ದನಂತೆ. ಅನಂತರ ಸೈತಾನ ಜೀಸಸ್ಸನ್ನು ಒಂದು ಗೋಪುರದ ತುದಿಯಲ್ಲಿ ನಿಲ್ಲಿಸಿ, ನೀನು ದೇವರ ಮಗನೇ ಆಗಿದ್ದರೆ ಇಲ್ಲಿಂದ ನೆಲಕ್ಕೆ ಹಾರು ಎಂದು ಆಜ್ಞಾಪಿಸಿದನಂತೆ. ಆಗಲೂ ಜೀಸಸ್ ಸುಮ್ಮನಿದ್ದನಂತೆ. ಕೊನೆಗೆ ಸೈತಾನ ಜೀಸಸ್‌ನನ್ನು ಒಂದು ಬೆಟ್ಟದ ತುದಿಗೆ ಕರೆದೊಯ್ದು ಅವನ ಕಣ್ಣಮುಂದೆ ವ್ಯಾಪಕವಾಗಿ ಹರಡಿದ್ದ ರಾಜ್ಯಗಳನ್ನು ತೋರಿಸಿ, ನೀನು ನನ್ನ ಕಾಲಿಗೆ ಬಿದ್ದರೆ ಈ ರಾಜ್ಯಗಳೆಲ್ಲಾ ನಿನ್ನದು ಎಂಬ ಆಮಿಷವನ್ನು ಒಡ್ಡಿದನಂತೆ. ಜೀಸಸ್ ಆ ಪ್ರಲೋಭನಕ್ಕೆ ಮರುಳಾಗದೇ, ''ಛೀ, ಇಲ್ಲಿಂದ ತೊಲಗು ಸೈತಾನ'' ಎಂದು ಅವನನ್ನು ಹೊರಗಟ್ಟುತ್ತಾನೆ. ಇಷ್ಟು ಬೈಬಲ್ಲಿನ ಕತೆ. ಮಾಮ್ ಇಷ್ಟು ಹೇಳಿ ಮತ್ತೆ ಮುಂದುವರಿಯುತ್ತಾ, '''ಸೈತಾನ ಅಷ್ಟಕ್ಕೆ ಸುಮ್ಮನಾಗಲಿಲ್ಲ, ಅವನು ಪುನಃ ಜೀಸಸ್ಸನ ಬಳಿ ಬಂದು, ನೀನು ಅತ್ಯಂತ ಕ್ರೂರವಾದ ಶಿಕ್ಷೆಗಳನ್ನು, ಅವಮಾನಗಳನ್ನು ಅನುಭವಿಸಲು ಸಿದ್ದನಿದ್ದರೆ, ಶಿಲುಬೆಗೆ ಏರಿ ಮುಳ್ಳಿನ ಕಿರೀಟವನ್ನು ಧರಿಸಿ ಸಾವನ್ನಪ್ಪಲು ಒಪ್ಪಿದರೆ ಜಗತ್ತಿನ ಸಮಸ್ತ ಜನತೆಯನ್ನು ಸಕಲ ಪಾಪಗಳಿಂದ ರಕ್ಷಿಸಿ, ಅವರುಗಳೆಲ್ಲರ ಕಷ್ಟ ಕಾರ್ಪಣ್ಯಗಳನ್ನು ಹೋಗಲಾಡಿಸುತ್ತೇನೆ. ಒಪ್ಪುತ್ತೀಯಾ?'' ಎಂದು ವಿನಮ್ರತೆಯಿಂದ ಕೇಳಿದನಂತೆ. ಜೀಸಸ್ ಈ ಆಮಿಷವನ್ನು ಸ್ವೀಕರಿಸಿದ ತಕ್ಷಣ ಸೈತಾನ ಬಿದ್ದು ಬಿದ್ದು ನಗುತ್ತಾ ಬಹು ಸಂತಸದಿಂದ ಅಲ್ಲಿಂದ ತೆರಳಿದನಂತೆ. ಎಲ್ಲರಿಗೂ ತಿಳಿದಿರುವ ಹಾಗೆ ಜೀಸಸ್ ಆ ಪ್ರಲೋಭನೆಗೆ ಮರುಳಾದರೂ ಇಂದಿಗೂ ''ಸೈತಾನನ ರಾಜ್ಯ ವಿಜೃಂಭಣೆಯಿಂದ ನಡೆಯುತ್ತಿದೆ'' ಎನ್ನುತ್ತಾನೆ ಮಾಮ್.

**ಶಿವಕುಮಾರ್**

# ಅವರೇ ಕಾಯಿಯ ಅಧಿಪತ್ಯ

• ಅರುಂಧತಿ ಜೋಶಿ



**ಮಾ**ಗಿಯ ಚಳಿ, ಕಬ್ಬು ಬೆಲ್ಲದ ಸುಗ್ಗಿಯ ಸಂಭ್ರಮ, ಎಳ್ಳು ಬೆಲ್ಲದ ಸಂಕ್ರಾಂತಿ, ಎಲ್ಲವೂ ನಮ್ಮೆದುರಿನಲ್ಲಿ ಸುಳಿದಾಡುತ್ತಿರುವಾಗ, ಅದರ ಜೊತೆಯಲ್ಲೇ ಎಲ್ಲಕ್ಕೂ ಅಗ್ರಮಾನ್ಯವಾಗಿ ನಮ್ಮ ಮೈಸೂರು ಸೀಮೆಯ ಅವರೇಕಾಯಿ ರಾರಾಜಿಸುತ್ತಿದೆ. ಇವೆಲ್ಲದರ ಮಧ್ಯದಲ್ಲಿ ಬೆರಗುಗೊಳಿಸುತ್ತಿರುವ ಅವರೇಕಾಯಿ ಮೇಳ ಎಲ್ಲರನ್ನೂ ಆಕರ್ಷಿಸುತ್ತಾ ಪ್ರಶಂಸೆಗಳಿಸುತ್ತಿದೆ. ಮೇಳ ಅಂದರೆ ಕುಂಭಮೇಳ ಎಂದಷ್ಟೇ ಕೇಳಿದ್ದ ನಮಗೆ ನಮ್ಮ ಶಬ್ದ ಭಂಡಾರದಲ್ಲಿ ಮತ್ತೊಂದು ಪದ ''ಅವರೇಕಾಯಿ ಮೇಳ'' ಸೇರಿಕೊಂಡಂತಿದೆ.

ಬೆಂಗಳೂರಿನಲ್ಲಿರುವ ಒಂದು ಪ್ರಸಿದ್ಧ ಬಡಾವಣೆಯಲ್ಲಿ ಬಹಳ ವರ್ಷಗಳಿಂದ, ಪ್ರತಿವರ್ಷ ಜರಗುವ ಈ ಮೇಳಕ್ಕೆ ಹೋದರೆ ಅವರೇಕಾಯಿ ಹೇಗೆ ವಿವಿಧ ರೂಪಗಳನ್ನು ತಾಳಿ, ಮೆರೆದಾಡುತ್ತಿದೆಯೆಂದು ನೀವೇ ನೋಡಿ ಆನಂದಿಸಬಹುದು. ಇದರ ಬಗ್ಗೆ ಇಷ್ಟು ಆಸಕ್ತಿ ವಹಿಸಿ ವಿವರಣೆ ಕೊಡುವ ಅಗತ್ಯವಿದೆಯೇ ಎಂದು ಕೇಳಬಹುದು. ನಿಮ್ಮೆಲ್ಲರ ಹಾಗೆ ನನಗೂ ಅವರೇಕಾಯಿಯ ಕಾಲ (ಸೀಸನ್) ಶುರುವಾದರೆ ಅದರದೇ ಧ್ಯಾನ. ನೋಡುತ್ತ ಕುಳಿತರೆ ಅದು ಕಣ್ಣಿಗೆಷ್ಟು ಹಬ್ಬ, ನಮ್ಮ ಪಚನಶಕ್ತಿ, ಪರ್ಸಿನ ಶಕ್ತಿಯನ್ನು ಅವಲಂಬಿಸಿ ಬೇಕಾದ ಹಾಗೆ ಈ ಅವರೆಯ ಸಮುದ್ರದಲ್ಲಿ ಇಳಿದು ಮನತಣಿಯುವವರೆಗೆ ತಿಂದು ಖುಷಿಪಡಬಹುದು.

ನಮ್ಮ ಜನರ ಪಾಕಶಾಸ್ತ್ರದ ನೈಪುಣ್ಯತೆ ಮತ್ತು ಅವರೇಕಾಯಿ ಎನ್ನುವ ಈ ತರಕಾರಿಯಿಂದ ವಿವಿಧ ವ್ಯಂಜನಗಳನ್ನು ಸಿದ್ಧಪಡಿಸಿ, ನಮ್ಮ ಮುಂದೆ ಸಾದರಪಡಿಸಿ, ಜಿಹ್ವಾ ಚಾಪಲ್ಯವನ್ನು ತಣಿಸುವುದು ನಿಜಕ್ಕೂ ಶ್ಲಾಘನೀಯ. ಅವರೇಕಾಯಿಯ ಕಾಲದಲ್ಲಿ ಸಂಜೆಯ ತಿರುಗಾಟಕ್ಕೆ ಹೊರಟರೆ, ಕಣ್ಮನ ಸೆಳೆಯುವ ದೃಶ್ಯಗಳು, ಸಲೀಸಾಗಿ ನಮ್ಮ ಕಣ್ಣೆದುರಿನಲ್ಲಿ ಅನಾವರಣಗೊಳ್ಳುತ್ತವೆ. ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಪಾದಚಾರಿಗಳ ಹಾದಿ ಮರೆಯಾಗಿ ಅಲ್ಲಿ ಸಾಲುಸಾಲಾಗಿ ಅವರೇಕಾಯಿ ಗುಡ್ಡಗಳು ತಲೆಯೆತ್ತಿ ನಿಂತಿರುತ್ತವೆ. ಮಾರಾಟಗಾರರ, ಗ್ರಾಹಕರ ಮೇಳ ಶುರುವಾಗಿ ಬಿಟ್ಟಿರುತ್ತದೆ. ರಸ್ತೆಯ ಅಂಚಿನಲ್ಲಿ ನಿಂತು ಖರೀದಿ ಮಾಡುವವರನ್ನು ವಾಹನ ಚಾಲಕರು ಕೆಂಗಣ್ಣಿನಿಂದ ದುರುಗುಟ್ಟಿ ನೋಡುತ್ತ ಹಾರ್ನನ್ನು ಬಾರಿಸುತ್ತಾರೆ. ಇದಕ್ಕೆಲ್ಲ ಹೆದರುವವರು ಬಹಳ ಕಡಿಮೆ. ರಸ್ತೆಯ ಬದಿಯಲ್ಲಿ ನಿಂತು

ವ್ಯಾಪಾರವನ್ನು ಶುರುಮಾಡಿ, ಒಂದು ಕೆ.ಜಿ.ಯಷ್ಟಾದರೂ ಅವರೇಕಾಯಿಯನ್ನು ಖರೀದಿ ಮಾಡಿಕೊಂಡೇ ಮುಂದಿನ ಹೆಜ್ಜೆ ಇಡಬೇಕು. ರಸ್ತೆ ಬದಿಯಲ್ಲಿ ನಿಂತು ಟ್ರಾಫಿಕ್ಕಿಗೆ ಅಡಚಣೆ ಒಡ್ಡುತ್ತಾ ಚೌಕಾಸಿ ಮಾಡಿ ಅವರೇಕಾಯಿ ಕೊಂಡುಕೊಳ್ಳಲೇ ಬೇಕೇ? ಎಂದು ಪ್ರಶ್ನಿಸಿದರೆ ಈ ಪ್ರಶ್ನೆಗೆ ಅವರೇಕಾಯಿಯ, ಘಮ್ಮೆನ್ನುವ ಸೊಗಡಿನ ಪರಿಮಳವೇ ಉತ್ತರ.

ಅದನ್ನು ಕೊಂಡು ತಂದು ಸಿಪ್ಪೆಯನ್ನು ಬಿಡಿಸಿ ಕಾಳನ್ನು ಬೇರೆ ಮಾಡುವಾಗ, ಖರೀದಿ ಮಾಡಿ ತರುವುದಕ್ಕಿಂತ ಇದು ಮತ್ತೊಂದು ದೊಡ್ಡ ಯಜ್ಞವೆನಿಸಿದರೆ, ಇದಕ್ಕಾಗಿ ಎಂಥ ಕಷ್ಟವನ್ನೂ ಅನುಭವಿಸಲು ಸಿದ್ಧರಿದ್ದೇವೆ ಎನ್ನುವುದು ಸಾಬೀತಾಗುತ್ತದೆ.

''ಗಂಗೆ ಬಾರೆ, ಗೌರಿ ಬಾರೆ, ತುಂಗಭದ್ರೆ ನೀನು ಬಾರೆ'' – ಈ ಜನಪ್ರಿಯ ಗೋವಿನ ಹಾಡಿನ ಸಾಲಿನಂತೆ ನನ್ನ ಮೊಮ್ಮಕ್ಕಳನ್ನು ಗೀತಾ, ಸೀತಾ, ರಾಮು, ಸೋಮು ಎಲ್ಲರೂ ಬೇಗ ಬನ್ನಿ ಎಂದು ಕರೆದು ಅವರನ್ನು ಮುಂದೆ ಕೂರಿಸಿಕೊಂಡು ಅವರೇಕಾಯಿ ಸಿಪ್ಪೆ ಬಿಡಿಸಿ ಕಾಳನ್ನು ತೆಗೆಯುವ ಸಂಭ್ರಮದ ಒಡನಾಟ ಲಭ್ಯವಾಗುವಾಗ ಅದನ್ನು ಕಾರ್ಯ ರೂಪಕ್ಕೆ ತರುವುದು ಜಾಣತನ.

ಅವರೇಕಾಯಿಯ ಒಂದೊಂದು ಸಣ್ಣಗುಡ್ಡೆಯನ್ನು ಜೋಡಿಸಿ ಅವರ ಮುಂದಿಟ್ಟು ಯಾರು ಬೇಗ ಸುಲಿದು ಮುಗಿಸುತ್ತಾರೋ ಅವರಿಗೆ ಚಾಕಲೇಟನ್ನು ಕೊಡುವ ಭರವಸೆಯನ್ನು ಇತ್ತು ಅವರಲ್ಲಿ ಸ್ಪರ್ಧೆಯನ್ನು ಸೃಷ್ಟಿಸಿ ನನ್ನ ಕೆಲಸವನ್ನು ಹಗುರ ಮಾಡಿಕೊಳ್ಳುತ್ತಿದ್ದೆ.

ಇದರಲ್ಲೂ ಒಂದು ಸಣ್ಣ ತೊಡಕು ಎದುರಾಗುತ್ತಿತ್ತು. ಬಿಡಿಸುವಾಗ ಕೆಲವೊಮ್ಮೆ ಸಿಪ್ಪೆಯ ಒಳಗಿನಿಂದ ಹಸಿರು ಹುಳು ತಲೆಯೆತ್ತಿ ನೋಡಿದಾಗ ಕಿರುಚಾಟ ಶುರುವಾಗುತ್ತಿತ್ತು.

''ಅಜ್ಜಿ ಇಷ್ಟು ದಪ್ಪ ಹುಳು ನನಗೆ ಭಯವಾಗುತ್ತೆ'' ಎಂದು ಗೀತಾ ನನ್ನ ಹತ್ತಿರ ಸರಿದು ಕುಳಿತಾಗ ನಾಲ್ಕರಲ್ಲಿ ಒಬ್ಬ ಆಟಗಾರ ಔಟ್ ಆದ ಹಾಗೇನೇ! ಈ ನನ್ನ ಕಾರ್ಯತಂತ್ರ ಬಹಳ ದಿನ ನಡೆಯಲಿಲ್ಲ. ಈ ಯೋಜನೆಗೆ ಮುಕ್ತಾಯ ಹೇಳುವ ಸಮಯ ಇಷ್ಟು ಬೇಗ ಬರಬಹುದೆಂದು ನಾನು ನಿರೀಕ್ಷಿಸಿರಲಿಲ್ಲ. ಒಂದು ಸಂಜೆ ವಾಯು ವಿಹಾರಕ್ಕೆ ಮತ್ತು ಶಾಪಿಂಗಿಗೆ ಹೊರಟು ನಿಂತಾಗ ಮೊಮ್ಮಕ್ಕಳು ಮುಂದೆ ಹಾಜರಾದರು.

''ಅಜ್ಜಿ ಇವತ್ತೂನೂ ಅವರೇಕಾಯಿ ತರ್ತೀಯಾ?'' ಈ ಪ್ರಶ್ನೆಯನ್ನು ಕೇಳಿದಾಗ ನಿಜಕ್ಕೂ ಸಂತೋಷದಲ್ಲಿ ಒಂದು ಸುತ್ತು ಉಬ್ಬಿಹೋದೆ. ಹಾಗಾದ್ರೆ ಇವರಿಗೆಲ್ಲ ಈ ಸ್ಪರ್ಧೆ ಇಷ್ಟವಾಗಿದೆಯೆನ್ನುವ ನನ್ನ ಭ್ರಮೆಯಿಂದ ಹೊರ ಬರಬೇಕಾಯಿತು.

''ಪ್ಲೀಸ್, ಅಜ್ಜಿ ಬಿಡಿಸಿಟ್ಟ ಅವರೇಕಾಳು ಸಿಗುತ್ತಂತಲ್ಲ ಅದನ್ನೇ ತಂದು ಬಿಡಿ, ನಮಗೆ ಟಿ.ವಿ. ಸೀರಿಯಲ್ ಮಿಸ್ ಆಗ್ತಿದೆ.''

''ಯಾಕೇ? ಸುಲೀತಿರ್ಬೇಕಾದ್ರೆ ನೋಡ್ಬಹುದಲ್ಲ'' ಅಂದೆ. ''ಇಲ್ಲ ಅಜ್ಜಿ, ಸುಲಿಯುವಾಗ ಉಗುರು ಸಂದಲ್ಲಿ ಒಂಥರಾ ಆಗುತ್ತೆ, ನಾವು ಬಿಡಿಸ್ಕೊಡಲ್ಲ.'' ಪೂರ್ಣ ಅಸಹಕಾರ ಆಂದೋಲನ ಘೋಷಿಸಿ ಬಿಟ್ಟರು. ಎಷ್ಟಾದರೂ ಇಪ್ಪತ್ತೊಂದನೇ ಶತಮಾನದ ಮಕ್ಕಳು.



''ಆಯ್ತು ಬಿಡಿ, ಯೋಚನೆ ಮಾಡಬೇಕಾದ ವಿಷಯಾನೇ.'' ನನ್ನ ಮಾತನ್ನು ಕೇಳಿ ಖುಷಿಯಾಗಿ ಚಪ್ಪಾಳೆ ತಟ್ಟುತ್ತ ಟಿ.ವಿ. ನೋಡಲು ಹೊರಟೇ ಬಿಟ್ಟರು. ಮುಂದೇನು ಮಾಡಬೇಕೆಂದು ತಲೆ ಕೆಡಿಸಿಕೊಳ್ಳುತ್ತ ಗೇಟಿನ ಹೊರಗೆ ಬಂದಾಗ ಮನೆ ಕೆಲಸದ ನಿಂಗಿ ಎದುರಾದಳು. ಕೆಲಸದ ಮನೆಗೆ ಹೊರಟಿದ್ದವಳನ್ನು ತಡೆದು ನಿಲ್ಲಿಸಿದೆ. ''ನಿಂಗಿ, ಸ್ವಲ್ಪ ಬಂದು ಅವರೇಕಾಯಿ ಬಿಡಿಸಿಕೊಡ್ತೀಯಾ?'' ''ಅಮ್ಮಾವ್ರೆ, ಹಿಂದಿನ ರಸ್ತೆಯ ಬೆಂಗಾಲಿಗಳ ಮನೆಯಲ್ಲಿ ಕೆಲಸ ಇನ್ನೂ ಮುಗಿದಿಲ್ಲ. ಅರ್ಧ ನಿಮಿಷ ಲೇಟಾದರೂ ಎಗರಾಡಿ ಬಿಡ್ತಾರೆ. ನನಗೂ ಸಮಯದ ಒತ್ತಡ ಇರುತ್ತದಲ್ಲ. ಆಯ್ತು ಬಿಡಿ ಅಮ್ಮಾವ್ರೆ. ಏನೋ, ವಯಸ್ಸಾದವರು ಕೇಳ್ತಿದೀರಿ, ಇಲ್ಲ ಅನ್ನೋದಕ್ಕೆ ಆಗುತ್ತೇನು? ಸುಲಿದು ಕೊಡ್ತೀನಿ. ಆದ್ರೆ ನನಗೆ ಒಂದು ಕೆ.ಜಿ. ಬಿಡಿಸಲಿಕ್ಕೆ ಐದು ರೂಪಾಯಿ ಕೊಡಬೇಕು.''

ವಾಹ್! ಮಾಡರ್ನ್ ಮನೆ ಕೆಲಸದಾಕಿ ಎಂದರೆ ಹೀಗೇ ಇರಬೇಕು. ಇದು ಕೇವಲ ಸ್ಪರ್ಧಾತ್ಮಕ ಯುಗ ಮಾತ್ರವಲ್ಲ, ಕಾಂಚಾಣದ ಅಧಿಪತ್ಯ ಹೆಚ್ಚಾಗುತ್ತಿರುವ ಕಾಲ.

ಎಲ್ಲೋ ನೀವೇ ತ್ರೇತಾಯುಗದಲ್ಲಿ ಇರೋ ಹಾಗಿದೆ ಎಂದು ನನ್ನ ಒಳ ಮನಸ್ಸು ಛೇಡಿಸಿತು. ಕೊನೆಗೆ ಅವಳ ಡೀಲ್‌ಗೆ ಒಪ್ಪಲೇ ಬೇಕಾಯಿತು. ''ಹಾಗಿದ್ರೆ, ನಾಳೆ ಕೆಲಸಕ್ಕೆ ಬಂದಾಗ ಬಿಡಿಸಿಕೊಡು'' ಎಂದು ಹೇಳಿ ಹೊರಟೆ.

ದಾರಿಯಲ್ಲಿ ನನ್ನ ಗೆಳತಿ ಪದ್ಮಜಾ ಭೇಟಿಯಾದಳು. ''ಎಲ್ಲಾ ಆರಾಮಾ?'' ಲೋಕಾರೂಢಿಯಂತೆ ವಿಚಾರಿಸಿದೆ. ಅವರಲ್ಲಿ ಕೆ.ಜಿ. ಲೆಕ್ಕದಲ್ಲಿ ಅವರೇಕಾಯಿ ನೀರಿನ ಹಾಗೆ ಖರ್ಚಾಗಿ ಬಿಡುತ್ತದೆ. ''ಹೇಗೆ ನಡೆದಿದೆ ನಿಮ್ಮ ಮನೆಯ ಅವರೇಕಾಯಿಯ ಸಂಭ್ರಮ?'' ಎಂದು ಕೇಳಿದಾಗ, ''ಮಕ್ಕಳಿಗೆಲ್ಲ ಹಿಸುಕು ಬೇಳೆ ಹಲ್ವ ಬೇಕಂತೆ. ಅದೇ ನೋಡು ಶುಚಿ ರುಚಿ ಕಾರ್ಯಕ್ರಮದಲ್ಲಿ ತೋರಿಸಿದ್ದರಲ್ವೇ! ಅದಕ್ಕೆ ಡಿಮ್ಯಾಂಡು ಜೋರಾಗಿದೆ. ಈ ಸೀಸನ್ ಮುಗಿಯೋವರೆಗೂ ಬೆಳಗ್ಗೆ ಮಧ್ಯಾಹ್ನ ಮತ್ತು ಸಂಜೆ ಮೂರೂ ಹೊತ್ತೂ ತಿಂಡಿ ಊಟಕ್ಕೆ ಅವರೇಕಾಯಿ ಇಲ್ಲದೇ ನಡಿಯೋದಿಲ್ಲ. ಮಾಡಿದಾಗ ನಿನಗೂ ತಂದು ಕೊಡ್ತೀನಿ'' ಅಂತ ಔದಾರ್ಯ ತೋರಿದಳು.

ಅವರೆಯ ಸಾಮ್ರಾಜ್ಯ ಅವರಲ್ಲಿ ಮಾತ್ರವಲ್ಲ ಎಲ್ಲೆಲ್ಲೂ ಅವರೆಯೇ ಆವರಿಸಿಕೊಂಡಂತಿದೆ. ಅವರೇಕಾಳಿನ ಉಪ್ಪಿಟ್ಟು, ಹಲ್ವ, ಮಿಕ್ಚರ್, ಅಕ್ಕಿರೊಟ್ಟಿ – ಎಷ್ಟು ಬರೆದರೂ ಮುಗಿಯದಷ್ಟು ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಲಂಕಾ ದಹನದ ಪ್ರಸಂಗದಲ್ಲಿ ರಾವಣನ ದರ್ಬಾರಿನಲ್ಲಿ ಹನುಮಂತನ ಬಾಲ ಬೆಳೆದಂತೆ ಇದರ ಮಹಾತ್ಮೆಯೂ ಬೆಳೆಯುತ್ತಾ ಹೋಗುತ್ತದೆ. ಮನೆಮನೆಗೂ ಮೆಟ್ಟಲಿದ್ದ ಹಾಗೆ ಮನೆಮನೆಯಲ್ಲೂ ಅವರೇಕಾಯಿ.

ಅವರೇಕಾಯಿಯ ಸಿಪ್ಪೆಯನ್ನು ತಿಪ್ಪೆಯಲ್ಲಿ ಎಸಿಯೋದಕ್ಕೆ ಹೊರಟಾಗ ಪತಿರಾಯರು ನನ್ನನ್ನು ತಡೆದು, ''ಆ ಚೀಲ ಇಲ್ಲಿ ಕೊಡು ಪಕ್ಕದ ತೋಟದಲ್ಲಿರೋ ಹಸು, ಮೇಕೆ ತಿನ್ನುತ್ತವಲ್ಲ? ಅವಕ್ಕೂ ಅವರೇಕಾಯಿ ಸಿಪ್ಪೆಯ ಸುಗ್ಗಿಯಾಗಲಿ'' ಎಂದು ಹೇಳಿದಾಗ ಪ್ರಾಣಿ ದಯಾ ಸಂಘದ ವತಿಯಿಂದ ಪ್ರಾಣಿಗಳಿಗೂ ಅವರೇಕಾಯಿಯ ಸೀಸನ್ನಿನ ರುಚಿ ಮುಟ್ಟಿಸಿದರೆ ನಿಜಕ್ಕೂ ಇದು ಸಂತೋಷದ ಸಂಗತಿ.

''ಕಲಿಯುಗದ ಮಹಿಮೆ ಕಾಣಬಂತೀಗ'' ಎಂಬ ದಾಸರ ಪದದ ಸಾಲು ನೆನಪಾಯಿತು. ಕಲಿಯುಗದಲ್ಲಿ ನಾವಿದ್ದೇವೆ. ನಮ್ಮ ಮುಂದೆ ರಾಶಿ–ರಾಶಿ ಅವರೇಕಾಯಿ ಇದೆ. ಎಲ್ಲರ ಮನೆಯಲ್ಲೂ ಅವರೆಯದೇ ಸಡಗರ ಸಂಭ್ರಮ.

✵

## ಓದುಗರ ಗಮನಕ್ಕೆ


* ಅಪರಂಜಿ ಚಂದಾ ವಿವರ ಬೇಕೆ?
* ಪತ್ರಿಕೆ ತಲುಪದ ವಿಚಾರ ನಮಗೆ ತಿಳಿಸಬೇಕಿದೆಯೆ?
* ನಮ್ಮ ಪತ್ರಿಕೆಗೆ ಲೇಖನ ಬರೆಯಲಿದ್ದೀರಾ?

ಇಂತಹ ವಿಷಯಗಳ ಬಗ್ಗೆ ಉಪಸಂಪಾದಕರೊಂದಿಗೆ ದೂರವಾಣಿ ಮಾಡಲು ಬಯಸುತ್ತೀರಾ? ಸಂತೋಷ. ಆದರೆ ಬೆಳಗ್ಗೆ 7.00 ರಿಂದ 8.30 ಸಮಯದಲ್ಲಿ ಮಾತ್ರ ಕರೆ ಮಾಡಲು ವಿನಂತಿ. ಉಳಿದ ಸಮಯ ಅವರ ಇತರ ಕೆಲಸಗಳಿಗೆ ಮೀಸಲಾಗಿರುತ್ತದೆ ಎಂಬುದು ನಿಮ್ಮ ನೆನಪಿನಲ್ಲಿರಲಿ.

**ಹಾಗೆಯೇ ಗಮನಿಸಿ:** ನೀವು ದೂರವಾಣಿ ಮಾಡಿದಾಗ ನಿಮ್ಮ ಕರೆಯನ್ನು ಯಾರು ಸ್ವೀಕರಿಸಿದರೂ, ಅವರೊಂದಿಗೆ ನೇರವಾಗಿ ಮಾತಿಗಿಳಿಯದೆ 'ಉಪಸಂಪಾದಕರು ಇದ್ದಾರೆಯೆ?' ಎಂದು ವಿಚಾರಿಸಿ, ಅವರೊಂದಿಗೆ ಮಾತ್ರ ಮಾತನಾಡುವುದು ಸೂಕ್ತ. ಅವರು ಸಿಗದಿದ್ದರೆ ಅವರು ಲಭ್ಯವಿರುವ ಸಮಯ ತಿಳಿದುಕೊಂಡು ನಂತರ ಕರೆ ಮಾಡಬಹುದು.

ಇದಕ್ಕಿಂತಲೂ ಒಂದು ಸರಳ ವಿಧಾನವಿದೆ. ನಿಮಗೆ ಬೇಕಾದ ಮಾಹಿತಿ ಕೋರಿ ಒಂದು ರಿಪ್ಲೈ ಕಾರ್ಡ್ ಬರೆಯಿರಿ. ಲಿಖಿತ ಉತ್ತರ ಸಿಗುತ್ತದೆ. ಅಂದಹಾಗೆ ನಿಮ್ಮ ವಿಳಾಸ, ಚಂದಾ ಸಂಖ್ಯೆ ತಿಳಿಸಲು ಮರೆಯದಿರಿ! ದಯವಿಟ್ಟು ಸಹಕರಿಸಿ.

– ಸಂಪಾದಕರು




# ವಾರೆನೋಟ

ನೇರನೋಟದಲ್ಲಿ ಸಿಗದ ಹಲವಾರು ಸತ್ಯಗಳು ವಾರೆನೋಟದಲ್ಲಿ ಸಿಗುತ್ತವೆ. ಬೆತ್ತಲೆ ರಾಜನ ಪ್ರಜೆಗಳೆಲ್ಲರೂ ಆಷಾಢಭೂತಿಗಳಾದಾಗ, ದಿಟ್ಟವಾಗಿ ಶೇಮ್ ಶೇಮ್ ಎಂದು ಹೇಳುವ ಮಕ್ಕಳ ಮುಗ್ಧ ಮನಸ್ಸು ಇಂತಹ ಬರವಣಿಗೆಗೆ ಬೇಕು. ಜೊತೆಯಲ್ಲಿ ರಾಜನನ್ನು ಎದುರು ಹಾಕಿಕೊಳ್ಳುವ ಧೈರ್ಯವೂ ಬೇಕು. ಪುಟ್ಟವಾದರೂ ಚುರುಕಾದ ಈ ಬರಹಗಳು. ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಒಂದು ಉದ್ಧರಣೆ ಪಂಚಗವ್ಯ ಇದ್ದಂತೆ.

ಮಂತ್ರಿಯಿಂದ ಹಿಡಿದು ಜನಸಾಮಾನ್ಯನವರೆಗೆ ಎಲ್ಲರಿಗೂ, ಸಾಹಿತ್ಯ ಶಿಕ್ಷಣದಿಂದ ಸಿನಿಮಾ ಕ್ರೀಡೆಯವರೆಗೆ ಎಲ್ಲವಕ್ಕೂ ಬೇಧಭಾವವಿಲ್ಲದೆ ಶಾಕ್ ಟ್ರೀಟ್‌ಮೆಂಟ್ ಕೊಡುವ ಆನಂದರ ಬರಹಗಳು ಸದ್ದಿಲ್ಲದೆ ಕೆಲಸ ಮಾಡುವಂತಹವು. ವರ್ತಮಾನದ ಆಗುಹೋಗುಗಳ ಬಗ್ಗೆ ಪ್ರೀತಿ, ತಮಾಷೆ, ವ್ಯಂಗ್ಯ ಬೀರುವ ಈ ತುಂಟ ಭಿನ್ನ ಬರಹಗಳು ಭೂತ, ಭವಿಷ್ಯದಲ್ಲಿಯೂ ಸಲ್ಲುವಂತಹವು. ಸಂಕೀರ್ಣವಾದ ರಾಜಕೀಯ ಸಂಗತಿಗಳನ್ನೂ ಸರಳವಾದ ಹೋಲಿಕೆ ನೀಡಿ ಅರ್ಥ ಮಾಡಿಸುವ ಆನಂದರ ಬರಹಗಳು ಸುಧಾ ಓದುಗರು ಓದುವ ಮೊದಲ ಲೇಖನವಾಗಿರುತ್ತಿತ್ತು.

ವಾರೆನೋಟಕ್ಕೆ ತಮ್ಮ ಮನಸ್ಸನ್ನು ಸಮರ್ಪಿಸಿಕೊಂಡರೂ ನೇರನೋಟವನ್ನು ಕಳೆದುಕೊಳ್ಳದ ಆನಂದರ ಬರವಣಿಗೆ ನಮ್ಮನ್ನು ಜನ ಮತ್ತು ಜಾಗ್ರತೆಯ ಮರುಳಿಗೆ ಒಳಗಾಗದಂತೆ ಕಾಪಾಡಲಿ.

– ವಸುಧೇಂದ್ರ

# ಒಂದು ಲೋನಿನ ಕತೆ

**• ವಾಣೀ ಸುರೇಶ್**

‘‘**ತ**ಕ್ಷಣ ಹೊರಡದಿದ್ರೆ ಬ್ಯಾಂಕ್ ಮುಚ್ಚಿಬಿಡ್ತಾರೆ ಅಷ್ಟೇ. ಆಮೇಲೆ ಮತ್ತೆ ಮುಂದಿನ ವೀಕೆಂಡ್‌ವರೆಗೂ ಕಾಯಬೇಕಾಗತ್ತೆ. ಅಷ್ಟೊತ್ತಿಗೆ ಡ್ಯೂ ಡೇಟ್ ಮುಗಿದು ಹೋಗಿರತ್ತೆ. ಸುಮ್ಮನೆ ಇಲ್ಲದ ತಲೆನೋವು’’ – ಅಂತಂದ ನನ್ನ ಮಗ.

‘‘ಒಂದು ನಿಮಿಷ ಕೊಡೋ, ಮುಂದಲೆ ಸರಿ ಮಾಡ್ಕೊಂಡ್ ಬಂದ್ಬಿಡ್ತೀನಿ’’ – ಅಂದೆ.

‘‘ಇಲ್ಲಿ ಯಾರೂ ನಿನ್ನನ್ನ ನೋಡಲ್ಲಮ್ಮ. ಸುಮ್ಮನೆ ಚಪ್ಪಲಿ ಹಾಕ್ಕೊಂಡ್ ಬರ್ತೀಯಾದ್ರೆ ಬಾ. ನೀನೇನು ಕಾರಿಂದ ಇಳೀಬೇಕಿಲ್ಲ ಏನಿಲ್ಲ, ಇಲ್ಲದಿದ್ರೆ ಬಿಡು, ನಾನೊಬ್ನೇ ಹೋಗಿ ಬರ್ತೀನಿ, ಹೌಸ್ ಲೋನಿನ ಚೆಕ್ ಕಟ್ಟಬೇಕಿತ್ತು, ಐದು ನಿಮಿಷದ ಕೆಲಸ. ಒಬ್ಬನೇ ಹೋಗಕ್ಕೆ ಬೇಜಾರೂಂತ ಕರೆದೆ ಅಷ್ಟೇ’’ – ಅಂದ.

ಅಯ್ಯೋ, ಏಳು ತಿಂಗಳಿಗೆ ಹುಟ್ಟಿಲ್ಲದಿದ್ರೂ ಇದ್ಯಾಕೆ ಹೀಗಾಡ್ತಾನೋ? ಈ ದೇಶದಲ್ಲೆಲ್ಲೆಲ್ಲೂ ಇರೋ ಅವಸರ ಅನ್ನೋ ಪಿಡುಗು ಇವನಿಗೂ ಅಂಟಿರಬೇಕು, ಛೇ. ಸ...ರಿ, ಬ್ಯಾಂಕಲ್ಲಿ ಲೋನ್ ರೀ ಪೇಮೆಂಟ್ ಐದು ನಿಮಿಷದಲ್ಲಿ ಆಗೋ ಕೆಲಸವೇ? ಹಾಯಾಗಿ ಕೂತ್ಕೊಂಡು ಟೀವಿ ಸೀರಿಯಲ್ ನೋಡಕ್ಕೂ ಬಿಡಲ್ವಲ್ಲಪ್ಪಾ ಇವನು – ಅಂತ ಒಲ್ಲದ ಮನಸ್ಸಲ್ಲಿ ಬೈಕೊಂಡು ಹೊರಟೆ. ಇಷ್ಟು ದೂರ ಬಂದಿದ್ರೂ ಒಂದು ದಿನ ನಮ್ಮ ಉದಯ ಟೀವಿ ನೋಡದಿದ್ರೆ ಏನು ಮುಜುಗರ ಅಂತ?

ಇಲ್ಲಿಯ ವೇಗದ ಕಾರಲ್ಲಿ ಹೋಗಕ್ಕೆ ಇನ್ನೆಷ್ಟು ಹೊತ್ತು ಹಿಡಿಸುತ್ತೆ ಮಹಾ? ಅಲ್ಲದೆ ಮನೆ ಹತ್ತಿರವೇ ಇದ್ದ ಬ್ಯಾಂಕು ಬೇರೆ. ವಿಶಾಲವಾದ ಜಾಗದಲ್ಲಿದ್ದ, ದೊಡ್ಡಕಟ್ಟಡ ಅದು. ಸುತ್ತಾಮುತ್ತಾ ಎಲ್ಲಿ ನೋಡಿದರೂ ಹಸಿರು ಹೊತ್ತಿದ್ದ ಮೇಪಲ್ ಮರಗಳು, ಇಲ್ಲ ಇಡೀ ಮರದ ತುಂಬಾ ಬಿಳೀ ಹೂ ಸುರೀತ್ತಿದ್ದ ಚೆರಿ ಮರಗಳು. ಸುತ್ತಲೂ ಒಂದಿಂಚು ಮಣ್ಣೂ ಕಾಣದಂತೆ ಹಚ್ಚ ಹಸಿರು ಲಾನಿನ ಅಂಚುಕಟ್ಟಿದ್ದಂತೆ ಬೆಳೆಸಿದ್ದ ಬಣ್ಣಬಣ್ಣದ ಹೂವಿನ ಗಿಡದ ಪೊದೆಗಳು! ಅಲ್ಲೀ ಅಚ್ಚುಕಟ್ಟು ನೋಡಿ ನನಗಂತೂ ಇನ್ನು ಮೇಲೆ ಇಲ್ಲೇ ಯಾಕೆ ವಾಕಿಗೆ ಬರಬಾರದೂಂತ ಅನ್ನಿಸಿಬಿಟ್ಟಿತು.

ಅಲ್ಲಾ, ಅಷ್ಟು ಧಾರಾಳವಾಗಿ ಹರಡಿಕೊಂಡಿದ್ದ ಪಾರ್ಕಿಂಗ್ ಲಾಟ್ನಲ್ಲಿ ಒಂದಾದರೂ ಕಾರು ನಿಂತಿರಬೇಡವೇ? ಊಹು!

ನಿಜವಾಗಲೂ ಲೇಟ್ ಆಗಿದೆ. ಸದ್ಯ, ನಾನೂ ಇನ್ನು ಕೂದಲು ಸಿಕ್ಕು ಬಿಡಿಸಿಕೊಂಡು ನಿಂತಿದ್ರೆ ಸರಿಯಾಗಿ ಆಗಿರ್ತಿತ್ತು...

ಇವನೂ ಸರಿ, ಅಲ್ಲಿ ನಿಲ್ಲಿಸದೇ ಬ್ಯಾಂಕಿನ ಪಕ್ಕಕ್ಕೆ ಹೋಗ್ತಿದ್ದಾನೆ! ಮೊದಲೇ

ಹೊತ್ತಾಗಿರುವಾಗ ತೋಟದ ಅಂದಚೆಂದ ತೋರಿಸಕ್ಕೆ ಇದು ಸರಿಯಾದ ಸಮಯವೇ, ಹೇಳೀಕೇಳಿ ಬ್ಯಾಂಕ್ ಲೋನಿನ ಕೆಲಸ ಬೇರೆ. ಓಡಿ ಹೋಗಿ ಬೇಗ ಕೆಲಸ ಮುಗಿಸಿಕೊಂಡು ಬರಬಾರದೇ – ನನ್ನ ಚಡಪಡಿಕೆ. ಒಳಗೊಳಗೇ – ಬೇಗ ಮನೆಗೆ ಹಿಂದಿರುಗಿದ್ರೆ, ಮುಂದಿನ ಸೀರಿಯಲ್ಲಾದ್ರೂ ಸರಿಯಾಗಿ ಪೂರ್ತಿ ನೋಡಬಹುದಲ್ಲಾ – ಅನ್ನೋ ದುರಾಸೆ ಬೇರೆ.

''ಇದೇನು ಕಾರ್ ಪಾರ್ಕ್ ಮಾಡದೆ ಇಲ್ಲೆಲ್ಲೋ ಬರ್ತಿದ್ದೀಯಲ್ಲ, ಮೊದಲು ಹೋಗಿ ಕೆಲಸ ಮುಗಿಸಿಕೋಬಾರದೇ, ಆಮೇಲೆ ನಿಧಾನವಾಗಿ ಇರಬಹುದಾಗಿತ್ತು'' – ಅಂದೆ. ನನಗೋ ಸುಮ್ಮನಿರಕ್ಕೆ ಆಗಬೇಕಲ್ಲ.

ಅಷ್ಟೊತ್ತಿಗೆ ನಾವು ಬ್ಯಾಂಕಿನ ಹಿಂಭಾಗಕ್ಕೆ ಬಂದಿದ್ದೆವು. ಅಲ್ಲೊಂದು ದೊ....ಡ್ಡ ಪೋರ್ಟಿಕೋ. ಪಾರ್ಕಿಂಗ್ ಲಾಟ್ನಲ್ಲಿ ಇರದ ಎಲ್ಲಾ ಕಾರುಗಳೂ ಇಲ್ಲೇ ಇದ್ದ ಹಾಗಿತ್ತು. ನಮ್ಮ ಎದುರಿಗೆ, ಪಕ್ಕದಲ್ಲಿ, ಎಲ್ಲಾ ಕಡೇನೂ ಕಾರುಗಳೇ.

ಪೋರ್ಟಿಕೋ ಕೆಳಗಿನ ಕಾರ್ ಲೇನಿನ ಮಧ್ಯದಲ್ಲಿ ಎತ್ತರದ ಸಿಮೆಂಟ್ ಕಂಭಗಳನ್ನು ಕಟ್ಟಿದ್ದರು, ಯಾಕೋ!

ಅಲ್ಲಾ, ಬ್ಯಾಂಕ್ ಕಟ್ಟಡಕ್ಕೆ ಸ್ವಲ್ಪಾನಾದ್ರೂ ಭದ್ರತೆ ಬೇಡವೇ? ..ಕೇಳ್ಬೇಡಿ! ಇದೂ ಸಹಾ, ಇಲ್ಲಿಯ ಎಲ್ಲಾ ಕಟ್ಟಡಗಳಂತೆ, ನಾಲಕ್ಕೂ ಅಂಚುಗಳನ್ನೂ ಭದ್ರವಾಗಿ ಸೀಲ್ ಮಾಡಿದ್ದ ಹಸಿರುಗಾಜಿನ ದೊಡ್ಡದೊಡ್ಡ ಕಿಟಕಿ ಫ್ರೇಮುಗಳ ಮಯಾನೇ!

ನಮ್ಮ ಹತ್ತಿರ ಇದ್ದ ಗಾಜಿನ ಫ್ರೇಮಲ್ಲಿ, ಕಂಪ್ಯೂಟರಿನಲ್ಲಿ ಏನೋ ಟೈಪ್ ಮಾಡ್ತಾ ಹೊಂಗೂದಲ ಚೆಲುವೆಯೊಬ್ಬಳು ನಸುನಗುತ್ತಾ ಕೂತಿದ್ದು ಮಸುಕು ಮಸುಕಾಗಿ ಕಾಣಿಸಿತು. ಬ್ಯಾಂಕಿನಲ್ಲಿ ಕೆಲಸ ಮಾಡೋರು ನಗ್ ನಗ್ತಾ ಇದ್ದಾರೇಂದ್ರೆ ಏನರ್ಥ? ಎಲ್ಲೋ ಅವಳ ಫ್ರೆಂಡ್ ಹತ್ತಿರ Online chat ಮಾಡ್ತಿರಬೇಕು ಅಂತ ನನಗೇನೋ ಒಂದು ಕ್ಷಣಕ್ಕೆ ಅನ್ನಿಸಿದ್ದಂತೂ ನಿಜ. ನೋಡಿದರೆ ಅವಳ ಪಕ್ಕದಲ್ಲಿ ಕಾಣಿಸಿದೋಳೂ ನಗ್ ನಗ್ತಾನೇ ಇದ್ದಳು! ಏನೋ ವಿಚಿತ್ರ.

ಎಡ ಪಕ್ಕಕ್ಕೆ ಇದ್ದ ಕಂಭದ ಹತ್ತಿರ ನಮ್ಮ ಕಾರು ನಿಲ್ಲಿಸಿದ ಇವನು. ಕಿಟಕಿ ಗಾಜು ಇಳಿಸಿದಾಗ ಸಿಮೆಂಟಿನ ಕಂಬದಲ್ಲಿ ಕಂಡಿದ್ದು – ಚಾವಣಿಯಿಂದ ಮಳೆನೀರು ಹೋಗಲು ನಮ್ಮ ಹಳೆ ಮನೆಗಳಲ್ಲಿ ಸಿಮೆಂಟಿನಲ್ಲಿ ಕಟ್ಟಿರುಲ್ವೆ ಆ ಥರಹ, ಕಂಬದೊಳಗೇ ಕೊರೆದಂತಿದ್ದ ಉದ್ದನೆಯ ಕೊಳವೆಯಾಕಾರದ ದೋಣಿ. ಅದರಲ್ಲಿ ಹುದುಗಿರಿಸಿದ್ದ ಒಂದು ನೀಲಿ ಬಣ್ಣದ, ಅಗಲ ಬಾಯಿಯ, ಪಾರದರ್ಶಕ ಪ್ಲಾಸ್ಟಿಕ್ ವಾಟರ್ ಬಾಟಲ್ಲಿನಂಥಹ ಒಂದು ವಸ್ತು ವಿಶೇಷ! ಇವನು ಅದನ್ನು ತೆಗೆದುಕೊಂಡು, ಮುಚ್ಚಳ ತೆಗೆದು ತನ್ನ ಚೆಕ್ಕು ಮತ್ತು ಡ್ರೈವಿಂಗ್ ಲೈಸನ್ಸನ್ನು ಅದರಲ್ಲಿಟ್ಟು ಮುಚ್ಚಿ, ಮತ್ತೆ ಅದರ ಜಾಗದಲ್ಲಿರಿಸಿ, ''ಈಗ ಒಂದು ತಮಾಷೆ ತೋರಿಸ್ತೀನಿ ನೋಡಮ್ಮ, ಅಂತ ಅಲ್ಲೇ ಕೆಳಗಿದ್ದ ಒಂದು ಸ್ವಿಚ್ ಒತ್ತಿದ. ನಾನು ಬೆರಗು ಬೆರಗಾಗಿ ನೋಡ್ತಿದ್ದ ಹಾಗೇ, ನಮ್ಮ ವಾಟರ್ ಬಾಟಲ್ಲು ಜುಂಯ್ ಅಂತ ಮೇಲೆ ಮೇಲಕ್ಕೆ, ನಮ್ಮ ಹಾಲಿಡೇ ಇನ್ನಿನ ಗಾಜಿನ ಲಿಫ್ಟ್ ಹೋಗೋ ಹಾಗೆ ಹೋಗ್ಬಿಟ್ಟೋದೇ! ಒಂದು ಕ್ಷಣದಲ್ಲಿ

ಅದೇ ಕಂಭದಲ್ಲಿ ಇರಿಸಿದ್ದ ಸ್ಪೀಕರಿಂದ ಹಾಯ್ ಆರ್ವೀನ್, ಸುಸ್ವಾಗತ. ನಿನ್ನ ಚೆಕ್ಕನ್ನು ಸ್ವೀಕರಿಸಲು ಸಂತೋಷ. ಈ ನಮ್ಮ ಫಾರಮ್ಮಿಗೆ ನಿನ್ನ ರುಜು ಬೇಕಿದೆ, ದಯವಿಟ್ಟು ಮಾಡು'' – ಅಂತ ಯಾವುದೋ ಅಶರೀರವಾಣಿ ಅಂದಿದ್ದು ಕೇಳಿಸ್ತು! ನೋಡಿದರೆ, ಮುಂದಿನ ಕ್ಷಣ ಮತ್ತೆ ಜುಂಯ್ ಅಂತ ಆ ವಾಟರ್ ಬಾಟಲ್ಲು ಅದೇ ಕಂಭದ ಕೊಳವೇಲಿ ಪ್ರತ್ಯಕ್ಷ! ಈ ಸಲ ಅದ್ರಲ್ಲಿ ಒಂದು ಪೆನ್ನು, ಹಾಗೂ ಒಂದು ಮಡಿಚಿಟ್ಟಿದ್ದ ಚಿಕ್ಕ ಫಾರಮ್ಮು! ಇವನು ಅದ್ರಲ್ಲಿ ರುಜು ಮಾಡಿ, ಮತ್ತೆ ಆ ವಾಟರ್ ಬಾಟಲ್ಲಲ್ಲಿರಿಸಿ, ಮತ್ತೆ ಜುಂಯ್... ಅನ್ನಿಸಿದ.

ಮುಂದಿನ ಅರ್ಧ ನಿಮಿಷದಲ್ಲಿ ಮತ್ತೆ ಸುಂದರಾಂಗಿಯ ಅಶರೀರವಾಣಿ – ''ಥ್ಯಾಂಕ್ ಯು ಆರ್ವೀನ್. ನಮ್ಮ ಬ್ಯಾಂಕಲ್ಲಿ ವ್ಯವಹರಿಸಿದ್ದಕ್ಕಾಗಿ ಧನ್ಯವಾದಗಳು. ನನ್ನಿಂದ, ನಮ್ಮ ಬ್ಯಾಂಕಿನ ಇನ್ನು ಯಾವುದಾದರೂ ಸೇವೆಯ ಅವಶ್ಯಕತೆ ಇದೆಯೇ? ಇಲ್ಲವಾದರೆ ಶುಭದಿನ ನಿನ್ನದಾಗಲಿ, ಹ್ಯಾಪಿ ವೀಕೆಂಡ್'' ಅಂತ ಕೇಳಿತು. ಇವನು ಬೇರೆ ಏನೂ ಇಲ್ಲವೆಂದು ಹೇಳಿ ಅವಳಿಗೂ ಶುಭ ದಿನ ಕೋರಿದ. ಮನೆಗೆ ವಾಪಸ್ ಹೊರಟಿದ್ದಾಯ್ತು, ಕಾರಿನ ಎಂಜಿನ್ನನ್ನು ಆರಿಸಿದ್ದರೆ ತಾನೇ ಸ್ಟಾರ್ಟ್ ಮಾಡೋ ಉಸಾಬರಿ? ನಂಬಿದರೆ ನಂಬಿ ಬಿಟ್ಟರೆ ಬಿಡಿ, ಇಷ್ಟಕ್ಕೂ ಹಿಡಿಸಿದ ಸಮಯ ಸರಿಯಾಗಿ ನಾಲಕ್ಕೂವರೆ ನಿಮಿಷಗಳು!! ಇಲ್ಲಿಯ ಡ್ರೈವ್ ಇನ್ ಬ್ಯಾಂಕಿನ ವೈಖರಿಯನ್ನು ಮೊದಲ ಬಾರಿಗೆ ನೋಡಿದ್ದ ನಂಗೆ, ಯಾಕೋ ತಕ್ಷಣ ಮಾತೇ ಮರೆತುಹೋದಹಾಗಿತ್ತು. ಇಲ್ಲಿ ನೋಡಿದ್ರೆ ಇವನು ನನ್ನ ಮುಖ ನೋಡಿ ಮೀಸೆಯಂಚಿನಲ್ಲೇ ಸಣ್ಣದಾಗಿ ನಗ್ತಾ ಮನೆ ಕಡೆ ಕಾರು ತಿರುಗಿಸಿದ.

ಆಮೇಲೆ..., ಟೀವಿ ಸೀರಿಯಲ್ ಎಷ್ಟು ಮಿಸ್ ಆಯ್ತು ಅಂತ ಅಂದ್ರಾ?

ಅಯ್ಯೋ, ಮಿಸ್ ಎಲ್ಲಿ ಬಂತು? ಇನ್ನೂ ಅದೇ ಸೀರಿಯಲ್ಲು ನಡೀತಿತ್ತು ಸದ್ಯ!

ನಾನು ಹೊರಟಾಗ, ನಾವೆಲ್ಲಾ ಇಷ್ಟವಾಗಿ ಕಾಯುವ ಆ ಹಸನ್ಮುಖಿ ಲಾಯರ್ರು ಒಂದು ಥರವಾಗಿ ನಗ್ತಾ, ಪಬ್ಲಿಕ್ ಪ್ರಾಸಿಕ್ಯೂಟರ್ನ ಮುಖದಲ್ಲಿ ನೀರಿಳಿಸುತ್ತಿದ್ದನಾ?

ನಾನು ವಾಪಸ್ ಬಂದು ನೋಡ್ತೀನಿ!..

ಪ.ಪ್ರಾ ಅವನ ಕೆಂಪು – ನೀಲಿ ಚೌಕಳಿ ಕರ್ಚೀಫಲ್ಲಿ ಪಾಪ ಇನ್ನೂ ಮುಖ ಒರಸಿಕೊಳ್ತಾನೇ ಇದ್ದ.

ಸುತ್ತಲೂ ಇದ್ದ ಎಲ್ಲರ ಮುಖಭಾವಗಳನ್ನ ಆಗ, ಒಂದೊಂದಾಗಿ ತೋರಿಸಕ್ಕೆ ಶುರು ಮಾಡಿದರು, ಸದ್ಯ!

✵

**ಖಾತರಿ ಮಾಡಿಕೊಳ್ಳಲು..**

ಅಂಕಿ ಅಂಶಗಳ ಪ್ರಕಾರ ಪ್ರತಿ ನಾಲ್ಕು ಮಂದಿಯಲ್ಲಿ ಮೂವರು ಮಾನಸಿಕ ಖಿನ್ನತೆಯಿಂದ ನರಳುತ್ತಿರುತ್ತಾರೆ. ನಿಮ್ಮ ಮೂವರು ಬೆಸ್ಟ್ ಫ್ರೆಂಡ್ಸ್ ಬಗ್ಗೆ ಯೋಚಿಸಿ. ಅವರು ಸರಿ ಇದ್ದರೆ ನರಳುತ್ತಿರುವವರು ನೀವೇ ಎಂಬುದು ಖಾತರಿ ಆದಂತೆ.




**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ಹುರುಳಿಕಾಯಿ

• ಪ್ರೇಮಾ ಭಟ್

**ಹ**ಚ್ಚ ಹಸಿರಿನ ಹುರುಳಿಕಾಯಿಯನ್ನು ಗುಡ್ಡೆಹಾಕಿ ಮಾರುತ್ತಿದ್ದ ಹೆಂಗಸನ್ನು ನೋಡಿ ಅಲ್ಲೊಂದು ಕ್ಷಣ ನಿಂತೆ. ಹುರುಳಿಕಾಯಿ ನೋಡಿ ಆಸೆಯಿಂದ ತುಟಿ ಅಂಚಿನಲ್ಲಿ ಜೊಲ್ಲುರಸ ಸರ‍್ರನೆ ಇಳಿಯಬೇಕೆ? ನನಗೆ ಹುರುಳಿಕಾಯಿ ಪಲ್ಯ ಎಂದರೆ ಇಷ್ಟ, ಯಜಮಾನರಿಗೆ ಹುರುಳಿಕಾಯಿ ಹಾಕಿದ ಕೂಟು ಎಂದರೆ ಇಷ್ಟ, ಪಲ್ಯ ಮಾಡಿ ಚಪಾತಿಯೊಳಗಿಟ್ಟು ಸುರುಳಿಮಾಡಿಕೊಟ್ಟರೆ ಒಂದೆರಡು ಗಂಟೆ ಜಗಿದು ಜಗಿದು ತಿನ್ನಬಲ್ಲ ಪುಟ್ಟಗೋಪಾಲನಂತಿದ್ದ ನನ್ನ ಮೊಮ್ಮಗ. ಅಷ್ಟು ಹೊತ್ತು ನಾಲ್ಕು ವರ್ಷದ ಆ ಪೋರನ ಸದ್ದುಗದ್ದಲ ಗಲಾಟೆ, ಕಿತಾಪತಿಯೆಲ್ಲಾ ಪಕ್ಕನೆ ಮಾಯವಾಗಿ ಬಿಡುತ್ತಿತ್ತು. ಹಣದುಬ್ಬರದ ಅಬ್ಬರದಲ್ಲಿ ಬೆಲೆ ಎಷ್ಟೇ ಇರಲಿ ಕೊಂಡೇ ಬಿಡೋಣ ಎನಿಸಿತು. ಬೆಲೆ ಕೇಳಿದರೆ ಗುಡ್ಡೆ ಹಾಕಿಕೊಂಡಿದ್ದ ಹೆಂಗಸು, 'ಯವ್ವ.. ಹಳ್ಳಿಯಿಂದ ನೆಟ್ಟಗೆ ಬಸ್ ಹತ್ತಿ ಇತ್ಲಾಗೆ ಬಂದಿವ್ನಿ. ಬೋ ಪಸಂದಾಗದೆ, ಬೆಲೆ ಹೆಚ್ಚಾಗೇನಿಲ್ಲ. ಒಂದು ರೂಪಾಯಿ ಕಮ್ಮಿ ಹಾಕಾಣೇಳು' ಕೇಜಿಗೆ ಐವತ್ತು ಕಣ್ರವ್ವ, ಕೊಂಡೋಗಿ ಯಜಮಾನರಿಗೆ ಅಡಿಗೆ ಮಾಡಿ ಹಾಕಿ ದಿನವಿಡೀ ಖುಷಿಯಾಗಿರ್ತಿದ್ರೆ ಕೇಳ್ರವ್ವ ಎಂದಳು. ಇವಳಿಗೆ ಹೇಗೆ ಗೊತ್ತಾಯ್ತು. ಯಜಮಾನರು ಯಾವಾಗ್ಲೂ ಬಿಗಿ ಮುಖದಲ್ಲಿರ್ತಾರೆ ಎಂದುಕೊಳ್ಳುತ್ತಾ ಹಾಳಾಗಿ ಹೋಗ್ಲಿ ಅದೆಲ್ಲಾ ಯಾಕೆ ಹುರುಳಿಕಾಯಿ ರೇಟು ತುಸು ಹೆಚ್ಚು ಎನಿಸಿದರೂ ಅದರ ತಾಜಾತನ ನೋಡಿ ಕೊಂಡೇ ಬಿಡೋಣ ಎನಿಸಿತು.

ವ್ಯಾನಿಟಿ ಬ್ಯಾಗಿನಿಂದ ಸಣ್ಣ ಪರ್ಸ್ ತೆಗೆದು ಜಿಪ್ ಬಿಡಿಸಿ ನೂರು ರೂಪಾಯಿ ನೋಟು ತೆಗೆದು ''ಎರಡು ಕೇಜಿಗೆ ಎಂಭತ್ತು ರೂಪಾಯಿ ಮಾಡ್ಕೊಂಡು ಕೊಡು'' ಎಂದೆ. ತಲೆ ಅಲ್ಲಾಡಿಸುತ್ತಾ ತರಕಾರಿ ಹೆಂಗಸು ''ಯವ್ವ ಆಗಾಕಿಲ್ಲ. ಆ ಕಾಲ ಹೊಂಟೋಯ್ತವ್ವ, ಕಲಬೆರಕೆ ಮಾಲುಗಳು ಸಿಗೋ ಕಾಲ ಕಣ್ರವ್ವ ಇದು. ನನ್ನ ಹುರುಳಿ ಕಾಯಿ ಹೆಂಗಯ್ತೆ? ಬತ್ತಾ ಹಳ್ಳಿಯಿಂದ ತಂದಿವ್ನಿ. ತಾಜಾ ಮಾಲು ಕಾಣ್ರವ್ವ, ಇದು ಕಲಬೆರಕೆ ಮಾಲಲ್ಲ ಕಣ್ರವ್ವ. ಕಲಬೆರಕೆ ಮಾಲಾಗಿದ್ರೆ ಕೊಂಡೋಗಿ ಅಂತಿದ್ದೆ. ಎಂಭತ್ತಲ್ಲ ತೊಂಭತ್ತು ರೂಪಾಯಿ ಒಗ್ದ್ರೂ ಕೊಡೋಕೆ ಆಗಾಕಿಲ್ಲ, ನೂರು ರೂಪಾಯಿ ನೋಟ್ ಬಿಸಾಕೊ ಹಂಗಿದ್ರೆ ಮಾತ್ರ ಕೊಂಡೋಗಿ'' ಎಂದು ರಪರಪ ಎಂದು ಮುಖಕ್ಕೆ ರಾಚುವ ಹಾಗೆ ಒದರಿದಳು. ಎಲಾ ಇವಳ ಒಂದು ರೂಪಾಯಿ ಬೇಕಾದರೆ ಕಮ್ಮಿ ಹಾಕಿಕೊಡೋಣ ಎಂದವಳು ಈಗ ಆಗುವುದೇ ಇಲ್ಲ ಎನ್ನುತ್ತಿದ್ದಾಳಲ್ಲ ಎಂದುಕೊಂಡ ನಾನು ಮತ್ತೆ ಇವಳದೇನು ಹಂಗು ಎಂದುಕೊಂಡು ನೂರರ ಹೊಸನೋಟನ್ನು ಕೊಟ್ಟು ಎರಡು ಕೇಜಿ ಹುರುಳಿಕಾಯಿಯನ್ನು ಕೈಚೀಲಕ್ಕೆ ತುಂಬಿಕೊಂಡು ಮನೆಗೆ ಬಂದೆ. ಸೊಸೆ ಕೈಲಿ ಚೀಲ ತಂದುಕೊಟ್ಟಾಗ ಅದರ ಬಾಯಿ ತೆಗೆದು ಹಣಕಿ ನೋಡಿದ ಅವಳು ''ಹುರುಳಿಕಾಯಿ ತಾಜಾ ಇದೆ'' ಎಂದಳು. ಅವಳ ಬಾಯಲ್ಲೂ ನೀರೂರಿರಬೇಕು. ''ಪಲ್ಯವೇ, ಕೂಟೆ'' ಅಡುಗೆ ಬಗ್ಗೆ ಪ್ರಸ್ತಾಪಿಸಿದಳು. ಅಡುಗೆ

ಮಾಡುವವಳು ಅವಳೆ ತಾನೆ. ನಾನು ಪಲ್ಯ ಎನ್ನುವಷ್ಟರಲ್ಲಿ, ಪೇಪರಿಗೆ ಮುಖ ಕೊಟ್ಟಿದ್ದ ಯಜಮಾನರು ಅಲ್ಲಿಂದಲೇ ''ಕೂಟು'' ಎಂದರು. ''ಅದರ ಜೊತೆಗೆ ಬೂದುಕುಂಬಳ ಬೆರೆಸಿ ಕೂಟೆ ಮಾಡಿ ಬಿಡು'' ಎಂದೆ, ಹಾಗಂತ ಹೇಳುತ್ತಾ ಹುರುಳಿಕಾಯಿಯನ್ನು ಮುರಿಯಲು ಕುಳಿತುಕೊಂಡೆ. ನಾನು ಹುರುಳಿಕಾಯಿಯನ್ನು ಮುರಿಯುತ್ತಿದ್ದಂತೆ ಮರಿಹುಳುವೊಂದು ಹೊರಗೆ ಬಂತು. ಹುರುಳಿಕಾಯಿ ಮುರಿದಾಗ ಅದಕ್ಕೆ ನೋವಾಗಿರಬೇಕು. ಅತ್ತಿತ್ತ ಹೊರಳುತ್ತಿದ್ದುದನ್ನು ನೋಡಿದೆ. ಎಲಾ ಹುರುಳಿಕಾಯಿಯಲ್ಲಿ ಹುಳುವೆ, ಅದರಲ್ಲೂ ತಾಜಾವಾಗಿತ್ತೆಂದು ತಂದೆನಲ್ಲ, ಇದೇನಿದು ಎಂದುಕೊಂಡು ಮತ್ತೊಂದು ಹುರುಳಿಕಾಯಿಯನ್ನು ಮುರಿದರೆ ಅಲ್ಲೂ ಹುಳು ಸಿಗಬೇಕೆ? ಸೊಸೆಯನ್ನು ಕರೆದು ಹೇಳಿದೆ. ''ಹುರುಳಿಕಾಯಿಯನ್ನು ಅಡುಗೆಗೆ ಉಪಯೋಗಿಸುವಂತಿಲ್ಲ, ಬೇಳೆ, ಕಾಳು, ಅಕ್ಕಿ, ಸಕ್ಕರೆ, ವಗೈರೆಗಳಿಗೆಲ್ಲಾ ಕಲಬೆರಕೆ ಮಾಡುತ್ತಾರೆ ಎಂದು ಸುದ್ದಿ ಮಾಧ್ಯಮ ತಿಳಿಸುತ್ತಿರುತ್ತವೆ. ಈಗ ನೋಡು ಹುರುಳಿಕಾಯಿಯಲ್ಲೂ ಕಲಬೆರಕೆ'' ಎಂದು ಲೊಚಗುಟ್ಟಿದೆ. ಏನು ಏನು ಎಂದು ಹೊರಬಂದಳು ಸೊಸೆ, ಅವಳಿಗೆ ನಾನು ಮುರಿದ ಹುರುಳಿಕಾಯಿಯನ್ನು ತೋರಿಸಿದೆ. ''ಎಲ್ಲೋ ಒಂದೆರಡರಲ್ಲಿ ಹುಳು ಕಂಡಿರಬೇಕು ನಿಮಗೆ'' ನಾನು ನೋಡುತ್ತೇನೆ ಎಂದು ನನ್ನ ಹತ್ತಿರ ಬಂದು ಕುಳಿತವಳು ಹುರುಳಿಕಾಯಿ ಮುರಿದಳು ಈಗ ಹುರುಳಿಕಾಯಿಯೊಳಗಿಂದ ಬಲಿತ ಒಂದು ಹುಳು ತಲೆ ಹೊರಹಾಕಿತು. ''ಅಯ್ಯೋ! ಅಯ್ಯೋ! ತರಕಾರಿನೂ ಕಲಬೆರಕೆ ಆಗೋಯ್ತು'' ಎಂದು ದಡ್ಡನೆ ಮಗುಚಿ ಆ ಕಡೆ ಬಿದ್ದಳು, ಗಾಭರಿಯಿಂದ ಸೊಸೆಯ ಪಕ್ಕಕ್ಕೆ ಜಿಗಿದು ''ಏನಾಯ್ತು'' ಎಂದು ಕೇಳಿದೆ. ''ಹೋಯ್ತಲ್ಲ ಅತ್ತೆ ನೂರು ರೂಪಾಯಿ ನೋಟು'' ಎಂದು ಅಲವತ್ತುಕೊಂಡಳು. ಹೌದಲ್ಲ ಅಲ್ಲಿವರೆಗೆ ಕಳೆದುಕೊಂಡ ನೂರು ರೂಪಾಯಿ ನೋಟಿಗೆ ಚಿಂತಿಸದ ನಾನು ಪ್ರಜ್ಞೆ ತಿಳಿದು ಎಚ್ಚೆತ್ತವಳಂತೆ ತುಂಡರಿಸಿದ ಹುರುಳಿಕಾಯಿಯೊಳಗಿಂದ ಹೊರಬಂದ ಹುಳು ಮೆಲ್ಲಗೆ ನೆಲದ ಮೇಲೆ ಹರಿದು ಹೋಗುತ್ತಿರುವುದನ್ನು ನೋಡುತ್ತ ''ಅನ್ಯಾಯವಾಗಿ ಹೋಯ್ತಲ್ಲ ನೂರುರೂಪಾಯಿ ನೋಟು.'' ತಾಜ ಎಂದು ತಂದ ಕಲಬೆರಕೆ ಹುರುಳಿಕಾಯಿ ಕಂಡು ನಿಟ್ಟುಸಿರು ಬಿಟ್ಟೆ. ಅದುವರೆಗೆ ಪತ್ರಿಕೆಗೆ ಮುಖಕೊಟ್ಟಿದ್ದ ಯಜಮಾನ್ರು, ''ಇವತ್ತು ಊಟಕ್ಕೆ ಕೂಟೋ'' ಎಂದರು. ''ಹೌದು ಹೌದು ಹುರುಳಿಕಾಯಿ, ಹುಳ ಎಲ್ಲಾ ಸೇರಿಸಿ ಅಡುಗೆ ಮಾಡೋಣಂತೆ ಕಲಬೆರಕೆ ಅಡುಗೆ'' ಎಂದು ಹೇಳುತ್ತಾ, ಹುರುಳಿಕಾಯಿಯನ್ನು ಹೊರಗೆ ಬಿಸುಟು ಬರಲು ಬುಟ್ಟಿಯೊಂದಿಗೆ ಹೊರಗೆ ಹೊರಟೆ. ಏನೊಂದು ಅರ್ಥವಾಗದ ಯಜಮಾನರು ಯಕರಾಪೆಕರ ನನ್ನತ್ತಲೇ ನೋಡಿದರು. ಅವರ ಹತಾಷೆಗೆ ನನ್ನಲ್ಲಿ ಉತ್ತರವಿರಲಿಲ್ಲ.

✵

ಬಹುಕಾಲ ದುಃಖಪೀಡಿತನಾಗಿದ್ದರೆ,
ದುಃಖವನ್ನೂ ಕಂಡು ನಗುವಂತಾಗುತ್ತದೆ.

– ಷೇಕ್ಸ್‌ಪಿಯರ್



# ಮೊನಾಲೀಸಾ

ಕಿರುನಗೆ ಏಕೆ? ಪೂರ ನಗಲೊಲ್ಲೆ ಏಕೆ?
ಪೂರ ನಗದಿರುವುದು ರೈಟೆ?, ಇದು ನಿನ್ನ ಕಾಪಿರೈಟೆ?,
ನಕ್ಕರೆ ಹಲ್ಲು ಕಂಡೀತೆಂದು ಭಯವೆ, ಬಾಯಲ್ಲಿ ಹಲ್ಲಿಲ್ಲವೆ,
ಬಂಗಾರದ ಹಲ್ಲೇ, ಡೆಂಚರ್ರೆ?

ಕಿರುನಗೆ ಏಕೆ? ಪೂರ ನಗಲೊಲ್ಲೆ ಏಕೆ?
ನಕ್ಕು ನಕ್ಕು ಸುಸ್ತಾಯಿತೇ, ಡಾವಿನ್ಸಿಯ ಭಯವೇ,
ಡಾವಿನ್ಸಿಯ ಹತ್ತಿರ ಬಣ್ಣ ಕಮ್ಮಿ ಇತ್ತೆ, ಪೂರಾ ನಕ್ಕರೆ ಜನ ಹುಚ್ಚೆದ್ದು
ಮರುಳಾಗುತ್ತಾರೆಂದು ಕರುಣೆಯಿಂದ್ಲೆ?

ಕಿರುನಗೆ ಏಕೆ? ಪೂರ ನಗಲೊಲ್ಲೆ ಏಕೆ?
ಗಾಜಿನ ಸುರಕ್ಷಾ ಪರದೆ ಹಿಂದೆ ಸೆರೆಯಾದನೆಂದು ಖೇದವೆ,
24 ಗಂಟೆ ನಿಂತು ನಿಂತು ಸುಸ್ತಿನಿಂದ್ಲೆ, ನೇತುಹಾಕಿರುವುದಕ್ಕೆ ಬೇಜಾರಿಂದ್ಲೆ,
ಎಂಟ್ರನ್ಸ್ ಫೀ ಹೆಚ್ಚು – ಸಾಕಷ್ಟು ರಸಿಕರು ಬರುತ್ತಿಲ್ಲ ಅಂತ ಕಸಿವಿಸಿಯೆ?

ಕಿರುನಗೆ ಏಕೆ? ಪೂರ ನಗಲೊಲ್ಲೆ ಏಕೆ?
ಒಡವೆ, ಆಭರಣ ಇಲ್ಲದೆ ಬೋಡು ಬೋಡಾಗಿದೆ ಅಂತ ದುಃಖವೆ,
ಮದುವೆ ಆಗಿಲ್ಲ ಎಂಗೇಜ್‌ಮೆಂಟೂ ಇಲ್ಲ ಎಂದು
ಒಂದಿಷ್ಟು ಬೇಜಾರೇ, ಐಶ್ವರ್ಯ ರಾಯ್ ತರಹ ಸ್ಲಿಮ್ಮಾಗಿಲ್ಲಾಂತ ದುಃಖವೆ?

ಕಿರುನಗೆ ಏಕೆ? ಪೂರ ನಗಲೊಲ್ಲೆ ಏಕೆ?
ಬಾಬ್ ಮಾಡಿಸ್ಕೋಳೋಕ್ಕೆ ಆಗ್ದೆ ಕೂದಲು ಹಾಗೇ ಬಿಟ್ಟುಕೊಂಡಿರುವುದಕ್ಕೆ ಕಸಿವಿಸಿಯೆ,
ತವರೂರು ಇಟಲಿಗೆ ಹೋಗಲು ಬಿಡುತ್ತಿಲ್ಲವೆ, ಪ್ಯಾರಿಸ್ ನಗರ ತೋರಿಸಿಲ್ಲ ಎಂದು
ದುಃಖಕ್ಕೆ ಪೂರಾ ನಗಲು ಸಾಧ್ಯವಾಗುತ್ತಿಲ್ಲವೆ?

ಕಿರುನಗೆ ಏಕೆ? ಪೂರ ನಗಲೊಲ್ಲೆ ಏಕೆ?
ಮ್ಯೂಸಿಯಂನಲ್ಲಿ ಕೂಡಿಹಾಕಿದಕ್ಕೆ, ಜಗಮಗ ದೀಪಗಳಿಂದ ಶೆಖೆಯೆ,
ಗಜಿಬಿಜಿ ಜನಗಳ ಜಾತ್ರೆಯ ಗದ್ದಲದ ಬೇಜಾರಿಂದ್ಲೆ,
''ಲಾಸ್ಟ್ ಸಪ್ಪರ್''ನಷ್ಟು ದೊಡ್ಡ ಚಿತ್ರ ಡಾವಿನ್ಸಿ ಬರೆಯಲಿಲ್ಲ ಅಂತ್ಲೆ?

ಹೇಳು ಮೊನಾಲೀಸಾ, ಹೇಳು
ಕಿರುನಗೆ ಏಕೆ? ಪೂರ ನಗಲೊಲ್ಲೆ ಏಕೆ?

●*ಹ.ನ. ವೇಣುಗೋಪಾಲ*

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು **ತುಂತುರು**

**- ದಂನಆ**

- ನಾನೊಬ್ಬ ನಿಗರ್ವಿ ಎಂದು ಹೇಳಲು ನನಗೆ ಹೆಮ್ಮೆ ಆಗುತ್ತದೆ.
- ಕಾಲು ದಣಿಯಬೇಕೇ ಹೊರತು ದಾರಿಗೆ ದಣಿವಿಲ್ಲ.
- ಮೊಬೈಲ್ ಫೋನನ್ನೇ ಉಪಯೋಗಿಸದವನನ್ನು cellbate ಎಂದು ಕರೆಯೋಣವೆ?
- We are what we only pretend to be so must be careful about what we pretend to be.
- ನಿಮ್ಮ ತಂದೆ ಬಡವರಾಗಿದ್ದರೆ ಅದು ನಿಮ್ಮ ಹಣೆ ಬರಹ. ನಿಮ್ಮ ಮಾವ ಬಡವರಾಗಿದ್ದರೆ ಅದು ನಿಮ್ಮ ಮೂರ್ಖತನವನ್ನು ತೋರಿಸುತ್ತದೆ.
- ಸುಸ್ತು ಎಕ್ಸರ್‌ಸೈಜ್ ಅಲ್ಲ ಎಕ್ಸರ್‌ಷನ್.
- ಜೀವನ ಎಂದರೆ ಎರೇಸರ್ ಇಲ್ಲದೆ ಬರೆಯುವ ಕಲೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- There are two kinds of roads in India – 1. under construction and 2. take deviation.
- 'ನನ್ನ ಅಪ್ಪ ಸರಿ ಇದ್ದ' ಎಂದು ಈಗ ನಿಮಗೆ ಮನದಟ್ಟಾಗಿದೆಯೆ? ಆದರೆ 'ನೀವು ಸರಿಯಿಲ್ಲ' ಎಂದು ನಿಮ್ಮ ಮಗ ಹೇಳುತ್ತಿದ್ದಾನಲ್ಲ !
- ದೊಡ್ಡ ಅಹಂಗಳಿಗೆ ಸಣ್ಣ ಕಿವಿಗಳಿರುತ್ತವೆ.
- ನ್ಯಾಯ ಎನ್ನುವುದು ಯಾವಾಗಲೂ ತಡವಾಗಿ ಬರುವ ರೈಲು ಎನ್ನಬಹುದು.
- Inflation is the worst form of taxation.
- ಮಾನಗೇಡಿ ಕೆಲಸ ಮಾಡಿ ಅವಮಾನಗೊಳ್ಳುವುದು ರೂಢಿ ಮಾಡಿಕೊಂಡಿರುವವನು ರಾಜಕಾರಣಿ ಆಗುತ್ತಾನೆ.
- ಅಪ್‌ಗ್ರೇಡ್ ಎಂದರೆ ಗೊತ್ತು. Upಅಪ್‌ಗ್ರೇಡ್ ಎಂದರೆ?
- 3 A's that define Pakistan – Allah, Army and America.
- Never judge a book by its movie.
- Success is simply a matter of luck. Ask any failure.....
- You will not be punished for your anger; you will be punished by your anger.
- ನಿಮ್ಮ ಹಳೆ ಕಾರು ಇನ್ನೂ ಚೆನ್ನಾಗಿ ಓಡಬೇಕೆ? ಹಾಗಿದ್ದರೆ ಹೊಸ ಕಾರಿನ ಬೆಲೆಯನ್ನು ವಿಚಾರಿಸಿ.

✵

# ಹೀಗಾಗಿದ್ದು ಏಕೆ ಹೇಳಿ

• ಬೇಲೂರು ರಾಮಮೂರ್ತಿ

1 ಶ್ರೀಮತಿಯ ಮದುವೆ ಕೊನೆ ಕ್ಷಣದಲ್ಲಿ ಮುರಿದುಬಿತ್ತು

2 ಚಿನ್ನ ಬೆಳ್ಳಿ ಅಂಗಡಿಯಿಂದ ಓಡುತ್ತಿದ್ದ ಕಳ್ಳನನ್ನು ಪೋಲಿಸರು ಬೆನ್ನಟ್ಟಿ ಮಾಲುಸಮೇತ ಹಿಡಿದು ಅಚ್ಚರಿಪಟ್ಟರು

3 ಗಂಡ ಹೆಂಡತಿಯನ್ನು ಮೂಳೆ ಮುರಿಯುವ ಹಾಗೆ ಬಾರಿಸಿದನಂತೆ

4 ಹೋಂ ವರ್ಕ್ ಮಾಡಿಕೊಂಡು ಹೋಗದಿದ್ದರೂ ಮೇಷ್ಟ್ರು ವಿದ್ಯಾರ್ಥಿಯನ್ನು ಶಿಕ್ಷಿಸಲಿಲ್ಲ

5 ಅವನು ವ್ಯಾಪಾರವನ್ನು ಬದಲಿಸಿಕೊಂಡಿದ್ದರಿಂದ ಒಂದೇ ತಿಂಗಳಿನಲ್ಲಿ ಸೈಟು ಕೊಂಡ

6 ಮನೆ ಮಾಲೀಕರು ಇದ್ದಕ್ಕಿದ್ದ ಹಾಗೆ ಮನೆಬಾಡಿಗೆಯನ್ನು ಮೂರುಪಟ್ಟು ಹೆಚ್ಚಿಸಿಬಿಟ್ಟರು

7 ಸುಶೀಲ ತನಗೆ ಬಂದ ಗಂಡುಗಳನ್ನೆಲ್ಲಾ ತಿರಸ್ಕರಿಸುತ್ತಿದ್ದಳು

8 ಬಸ್ಸು ಬೆಂಗಳೂರಿನಿಂದ ತುಮಕೂರಿಗೆ ಹೋಗಲು ಆರುಗಂಟೆ ತಗೊಂಡ್ತಂತೆ

9 ಅತ್ತೆ ತನ್ನ ಸೊಸೆಯನ್ನು ಬಾಯಿಗೆ ಬಂದಂತೆ ಬೈದು ಉಪವಾಸ ಕೆಡವಿದಳಂತೆ

10 ಗಾಯಿತ್ರಿ ಸುಧಾಕರನನ್ನು ಪ್ರೀತಿಸುವುದನ್ನೇ ಬಿಟ್ಟಳು

11 ಫ್ಯಾಕ್ಟರಿ ಕ್ಯಾಂಟೀನಿನಲ್ಲಿ ಕೆಲಸಮಾಡುತ್ತಿದ್ದ ಅಡುಗೆಯವನನ್ನು ಇದ್ದಕ್ಕಿದ್ದ ಹಾಗೆ ಕೆಲಸದಿಂದ ತೆಗೆದುಬಿಟ್ಟರು

12 ಆ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಎಲ್ಲಾ ಪಾಸು

13 ಐಎಎಸ್ ಆಫೀಸರ್ ಮಾರನಾಯಕ ತನ್ನ ವರ್ಗವನ್ನು ರದ್ದುಗೊಳಿಸಿಕೊಂಡ

14 ಲಂಚ ಕೊಡ್ತಿನಿ ಅಂದ್ರೂ ಒಂದು ಅಫಿಡೆವಿಟ್ಟು ಆಗಬೇಕಾದರೂ ಈಗ ಬಹಳ ಕಷ್ಟಪಡಬೇಕಾಗಿದೆ

*(ಹೀಗಾಗಿದ್ದು ಏಕೆಂದು ತಿಳಿಯಬೇಕೇ? ಪುಟ 40 ನೋಡಿ)*

# ಸಿಂಥೆಟಿಕ್ ಸೆಗಣಿಗೆ ಹುಡುಕಾಟ

• ನಾಗೇಶ ಹೆಗಡೆ

*ಅಪ್ಪಟ ದೇಸೀ ತಳಿಯ ಸೆಗಣಿ ಬೇಕಿತ್ತು. ಆದರೆ ಅದೇನು ಸುಲಭದ ಮಾತೆ, ಎಲ್ಲಿದ್ದಾಳೆ ಅಪ್ಪಟ ಗೋಮಾತೆ?*

**ನ**ಮ್ಮ ನಾಯಿ 'ಕಾಫಿ'ಯ ಜತೆ ದಿನಾ ಸಂಜೆ ಗೋಧೂಳಿ ವೇಳೆಗೆ ಹಳ್ಳಿಯ ಪಕ್ಕದ ಕೆರೆಯ ಅಂಚಿನಲ್ಲಿ ವಾಕಿಂಗ್ ಹೋಗುವುದು ಅಭ್ಯಾಸವಾಗಿತ್ತು. ನಮಗಲ್ಲ, ಕಾಫಿಗೆ ಅದು ಅಭ್ಯಾಸವಾಗಿತ್ತು. ಸಂಜೆ ಐದಾದರೂ ಮನೆಯಿಂದ ಹೊರಡದೇ ಇದ್ದರೆ ಕಾಫಿಗೆ ಚಡಪಡಿಕೆ ಆರಂಭವಾಗಿ ಹಿಂದಕ್ಕೂ ಮುಂದಕ್ಕೂ ಠಳಾಯಿಸುತ್ತ ಕೊನೆಗೆ ಕಂಪ್ಯೂಟರ್ ಎದುರು ನನ್ನ ಕೈಯಲ್ಲಿರುವ ಮೌಸನ್ನೇ ಕಿತ್ತು ರಾಮಾ ರಂಪ ಮಾಡುತ್ತಿತ್ತು.

ವಾಕಿಂಗ್ ಹೋಗಲು ನನ್ನ ಒಂದು ಸ್ವಾರ್ಥವೂ ಇತ್ತೆನ್ನಿ. ಪಾಳೇಕರ್ ಎಂಬ ಒಬ್ಬ ಮರಾಠಿ ಕೃಷಿಕ ಅದೇನೋ ಜೀವಾಮೃತ, ಬೀಜಾಮೃತ ಎಂಬ ಎರಡು ಬೀಜಮಂತ್ರಗಳ ಬಗ್ಗೆ ಭಾರೀ ಪ್ರಚಾರ ಮಾಡಿದ್ದ. ವಿಷರಹಿತ ''ಸಾವಯವ ಕೃಷಿ'' ಮಾಡುವವರು ಬೆಲ್ಲ, ಗೋಧಿ ಹಿಟ್ಟು, ಹಿಡಿಮಣ್ಣು ಸೆಗಣಿ ಇತ್ಯಾದಿ ಸೇರಿಸಿ ಒಂಥರಾ ಕಷಾಯ ಮಾಡಿ ಇಟ್ಟುಕೊಳ್ಳಬೇಕೆಂದು ಬೋಧಿಸಿದ್ದ. ಬೆಂಗಳೂರಿನ ಯಾವ ಮಾಲ್‌ನಲ್ಲೂ ಸಿಗದ ಈ ಸೆಗಣಿಯನ್ನು ಎಲ್ಲಿಂದ ತರೋಣ? ಮನೆಯ ಪಕ್ಕ ಕೊಟ್ಟಿಗೆಯೇ ಇಲ್ಲ, ಸೆಗಣಿ ಹಾಕುವ ದನಗಳನ್ನು ಎಲ್ಲಿಂದ ತರೋಣ? ಅದಕ್ಕೇ ಒಂದೆರಡು ಪ್ಲಾಸ್ಟಿಕ್ ಚೀಲಗಳನ್ನೂ ಮಡಚಿ ಕಿಸೆಯಲ್ಲಿ ಬಚ್ಚಿಟ್ಟುಕೊಂಡು ವಾಕಿಂಗ್ ಹೋಗುವುದು ರೂಢಿಯಾಗಿತ್ತು.

ಸೆಗಣಿಯನ್ನು ಬಾಚಿ ತರಲು ಸೂಕ್ಷ್ಮಗ್ರಹಿಕೆಯೊಂದೇ ಸಾಲದು, ಪಾರಂಪರಿಕ ಜ್ಞಾನವೂ ಬೇಕು. ಅದರಲ್ಲೂ ಜರ್ಸಿ, ಎಚ್ಚೆಫ್ ಅಥವಾ ಮಿಶ್ರತಳಿ ಹಸುಗಳ ಸೆಗಣಿ 'ಸುತಾರಾಂ ಕೂಡದು' ಎಂದು ಪಾಳೇಕರ್ ಹೇಳಿದ್ದರಿಂದ, ಅಪ್ಪಟ ದೇಸೀ ತಳಿಯ ಸೆಗಣಿಯನ್ನೇ ಹೆಕ್ಕಬೇಕು. ಅದೇನು ಸುಲಭದ ಮಾತೆ, ಎಲ್ಲಿದ್ದಾಳೆ ಅಪ್ಪಟ ಗೋಮಾತೆ? ಹಗಲು ಹೊತ್ತಿನಲ್ಲೇ ಮನೆಯ ಛಾವಣಿ ಏರಿ ದುರ್ಬಿನ್ ಹಿಡಿದು, ಯಾವ ಗೋವು ಎಲ್ಲಿ ಮೇಯುತ್ತಿದೆ, ಅದು ಯಾವ ತಳಿಯದ್ದು ಎಂದೆಲ್ಲ ಲೆಕ್ಕ ಹಾಕಿಟ್ಟುಕೊಳ್ಳಬೇಕು. ವಾಕಿಂಗ್ ಹೋದಾಗ, ಹುಲ್ಲಿನ ನಡುವೆ ಹುಡುಕುವುದಾದರೂ ಬಣವೆಯಲ್ಲಿ ಸೂಜಿ ಹುಡುಕಿದಷ್ಟು ಕಾಳಜಿ ಇರಬೇಕು. ಅದು ತೀರಾ ತಾಜಾ ಇದ್ದರೆ ಬಾಚುವುದು ಕಷ್ಟ, ತೀರಾ ಒಣಗಿದ್ದರಂತೂ ಗೆದ್ದಲು ಹತ್ತಿ ಮಣ್ಣಿನ ಮುದ್ದೆ ಆಗಿರುತ್ತದೆ. ಇನ್ನು ಆ ಗೋಮಾತೆಗೆ ಅಜೀರ್ಣವಾಗಿದ್ದರಂತೂ ತೀರಿತು.

ಅಂತೂ ಇಂತೂ ಹುಡುಕಾಡಿ ಸೂಕ್ತವಾದದ್ದನ್ನು ಗುರುತಿಸಿ, ಅತ್ತಿತ್ತ ನೋಡಿ, ಯಾರೂ ನಮ್ಮನ್ನು ಹಿಂಬಾಲಿಸುತ್ತಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಂಡು, ಮೆಲ್ಲಗೆ ಜೇಬಿನಿಂದ ಪ್ಲಾಸ್ಟಿಕ್ ಚೀಲ ತೆಗೆದು ಒಂದೆರಡು ಬೆರಣಿಯನ್ನು ಅದರಲ್ಲಿ ತುಂಬಿಕೊಂಡರೆ ಅಂದಿನ ಪಯಣ ಸಾರ್ಥಕ.

ಎಲ್ಲವೂ ಲೆಕ್ಕಾಚಾರದಂತೆ ನಡೆಯುತ್ತಿದ್ದಾಗ, ಒಂದು ದಿನ ನಮ್ಮ ಸೆಗಣಿ ಸಂಗ್ರಹಕ್ಕೆ ಕಲ್ಲು ಬಿತ್ತು. ಅಕ್ಷರಶಃ ಕಲ್ಲು ಬಿತ್ತು ಎನ್ನಿ. ಅದ್ಯಾವುದೋ ಫಲಭರಿತ ಹಲಸಿನ ಮರದ ಕೆಳಗೆ ನಮ್ಮ ಕಾಯಕ ನಡೆಸಿದ್ದೆವು. ಸೆಗಣಿ ಹೆಕ್ಕುತ್ತಿದ್ದ ನಮ್ಮನ್ನು ಕಾಯಿ ಕದಿಯಲು ಬಂದ ಖದೀಮರೆಂದೇ ಭಾವಿಸಿ ದೂರದಿಂದಲೇ ಕಲ್ಲು ಬೀಸಿ, ಕೂಗಾಡುತ್ತ ಹೈದನೊಬ್ಬ ಓಡಿಬಂದ. ನಮ್ಮ ಕಾಯಕವನ್ನು ನೋಡಿ ಅವನಿಗೆ ಏನನ್ನಿಸಿತೊ ಗೊತ್ತಿಲ್ಲ. ನಮಗಂತೂ ಈಚಲ ಮರದ ಕೆಳಗೆ ಮಜ್ಜಿಗೆ ಕುಡಿದಂತಾಯಿತು.

''ಇನ್ನುಮೇಲೆ ಪಬ್ಲಿಕ್ ಸೆಗಣಿ ಸಂಗ್ರಹ ಬೇಡವೇ ಬೇಡ'' ಮನೆಯಾಕೆಯಿಂದ ತಡೆಯಾಜ್ಞೆ ಬಂತು. ''ಸೆಗಣಿಗೆ ಬೇಕಿದ್ದರೆ ದನ ಕಟ್ಟಿಕೊಳ್ಳೋಣ. ಗಂಜಳಾನೂ ಸಿಗುತ್ತದೆ'' ಎಂದಳು ಈಕೆ.

''ಕೋಳಿ ಸಾಕಿಕೊಳ್ಳಿ; ಸೆಗಣಿಗಿಂತ ಕೋಳಿ ಗೊಬ್ಬರ ಉತ್ತಮ'' ಎಂದಿದ್ದರು ನಾಡೋಜ ನಾರಾಯಣ ರೆಡ್ಡಿ. ಕೋಳಿ ಇದ್ದರೆ ಗೆದ್ದಲನ್ನೂ ತಿಂದು ಕಂಟ್ರೋಲ್ ಮಾಡ್ತವೆ ಎಂತಲೂ ಹೇಳಿದ್ದರು. ಸರಿ, ಪಾಳೇಕರ್‌ಗೆ ಗೊತ್ತಾಗದ ಹಾಗೆ, ಕೋಳಿ ಹಿಕ್ಕೆಯಲ್ಲೇ ಜೀವಾಮೃತ ತಯಾರಿಸೋಣ ಎಂದು ನಿರ್ಧರಿಸಿದೆವು.

ಕೋಳಿ ತಂದೆವು. ಅವಕ್ಕೆಂದು ಸಜ್ಜೆ, ನವಣೆ, ಜೋಳ, ರಾಗಿ ಎಲ್ಲವನ್ನೂ ತಂದೆವು. ಅವೆಲ್ಲ ಇದ್ದರೂ ಅವು ತರಕಾರಿ ಸಸಿಗಳಿದ್ದಲ್ಲಿ ಹೋಗಿ ಮಣ್ಣು ಕೆದಕಿ ಗೆದ್ದಲನ್ನು ಹುಡುಕುತ್ತಿದ್ದವು. ಕ್ರಮೇಣ ಅವಕ್ಕೆಂದೇ ಗೆದ್ದಲು ಹುಡುಕುವ ಕೆಲಸ ಆರಂಭವಾಯಿತು. ಮೊದಮೊದಲು ಸನಿಕೆ ಹಿಡಿದು ಹುತ್ತಗಳನ್ನು ಒಡೆದು ಗೆದ್ದಲನ್ನು ಅವಕ್ಕೆ ತಿನ್ನಲು ಕೊಟ್ಟಿದ್ದೇ ತಪ್ಪಾಗಿತ್ತು. ಈಗ ನಾವು ಎಲ್ಲೇ ಪಾತಿ ಮಾಡಲೆಂದು ಸನಿಕೆ ಹಿಡಿದು ಹೊರಟರೂ ಅವು ಹಿಂದೆ ಹಿಂದೆ ಬರೋವು. ತೋಟದಲ್ಲಿ ಎಲ್ಲೇ ನೆಲಕ್ಕೆ ಸನಿಕೆ ಏಟು ಕೊಟ್ಟರೂ ಅಲ್ಲಿಗೇ ನುಗ್ಗಿ ಪೈಪೋಟಿಯಲ್ಲಿ ಈ ಕೋಳಿಗಳು ನೆಲ ಕೆದಕುತ್ತಿದ್ದವು. ಪೇಟೆಯ ಹಳಸಲು ಕಾಳು ಕಡ್ಡಿ ಕೂಡ ತೀರಾ ದುಬಾರಿ ಆಗಿದ್ದರಿಂದ ನಮಗದು ಅನುಕೂಲವೇ ಆಗಿತ್ತು. ತೋಟದಲ್ಲಿದ್ದ ಜೇಡ, ಚಿಟ್ಟೆಮೊಟ್ಟೆ, ಕಾಡು ಜಿರಳೆ, ಚೇಳಿನ ಮರಿ, ಹಾವಿನ ಮರಿ ಎಲ್ಲವನ್ನೂ ಸ್ವಾಹಾ ಮಾಡಿ ಮತ್ತೆ ಗೆದ್ದಲು ಬೇಕೆಂದು ನಮ್ಮನ್ನು ಪೀಡಿಸುತ್ತಿದ್ದವು.

ಸರಿ, ಕೋಳಿಗಳಿಗೆಂದು ಗೆದ್ದಲು ಸಾಕುವ ಅಭಿಯಾನವನ್ನು ನನ್ನ ಶ್ರೀಮತಿ ಕೈಗೊಂಡಳು. ಇಂಟರ್‌ನೆಟ್‌ನಲ್ಲಿ ಹುಡುಕಿದರೆ ಗೆದ್ದಲನ್ನು ನಾಶ ಮಾಡುವ ನಾನಾ ಬಗೆಯ ವಿಷದ ಪುಡಿಗಳ ಬಗ್ಗೆ ಮಾಹಿತಿ ಇದ್ದುವೇ ವಿನಾ, ಗೆದ್ದಲು ಸಾಕಣೆ ಹೇಗೆಂದು ಯಾರೂ ಹೇಳುತ್ತಿಲ್ಲ.

ಅಕ್ಕಪಕ್ಕದ ಹಳ್ಳಿಯ ರೈತರನ್ನು ಕೇಳಿದ್ದಾಯಿತು. ''ಐ ಅದ್ಯಾಕ್ರಾ? ಕಾಡಿಗೆ ಹೋದ್ರೆ ಎಷ್ಟೆಲ್ಲ ಹುತ್ತ ಇರ್ತವೆ, ಬೇಕಾದಷ್ಟು ತಗಂಡ್‌ಬನ್ನಿ'' ಎಂದರು. ಆದರೆ ಸೆಗಣಿಯ ಪ್ರಕರಣವನ್ನು ನಾವು ಮರೆತಿರಲಿಲ್ಲ.

ಕೆಲವು ವರ್ಷಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಪರಿಚಿತ ಕೃಷಿಕರೊಬ್ಬರು ಗೆದ್ದಲು ಹಿಡಿದಿದ್ದ ಅರ್ಧ ಕಿಲೊ ಕರೆನ್ಸಿ ನೋಟುಗಳನ್ನು ತಂದು ಬೆಂಗಳೂರಿನ ನಮ್ಮ ಡೈನಿಂಗ್ ಟೇಬಲ್ ಮೇಲೆ ಸುರಿದಿದ್ದರು. ಅವರ ಮನೆತನದ ಹಿರಿಯರೊಬ್ಬರು ನೂರು ರೂಪಾಯಿಗಳ ನೂರಾರು ನೋಟುಗಳನ್ನು ಒಂದು ಮಡಕೆಯಲ್ಲಿ ತುಂಬಿ ಕೊಟ್ಟಿಗೆಯ ಹಿಂಭಾಗದಲ್ಲಿ ಹೂತಿಟ್ಟಿದ್ದ ಕತೆ ಹೇಳಿದ್ದರು. ಕೊಟ್ಟಿಗೆಯ ವಿಸ್ತರಣೆಗೆಂದು ನೆಲ ಅಗೆಯುತ್ತಿದ್ದಾಗ ಮಡಕೆ ಸಿಕ್ಕಿತಂತೆ; ಚಿನ್ನಾಭರಣ ಏನಾದರೂ ಇದ್ದೀತೆಂದು ಕಾತರದಿಂದ ಮಣ್ಣಿನ ಮುಚ್ಚಳವನ್ನು ತೆರೆದು ನೋಡಿದಾಗ ಅದರಲ್ಲಿ ಇಷ್ಟೆಲ್ಲ ಚಿಂದಿ ನೋಟುಗಳೂ ಸಿಕ್ಕಿದ್ದವು. ರಿಸರ್ವ್ ಬ್ಯಾಂಕ್‌ಗೆ ಕೊಟ್ಟರೆ ಏನಾದರೂ ಪರಿಹಾರ ಸಿಕ್ಕೀತೆ ಎಂದು ವಿಚಾರಿಸಲೆಂದು ಅವರು ಬಂದಿದ್ದರು. ನೋಟಿನ ಮೇಲಿನ ಕ್ರಮಸಂಖ್ಯೆಗಳ ಮೇಲೂ ರಂಧ್ರಗಳಿದ್ದುದರಿಂದ ನೂರಕ್ಕೆ 99ರಷ್ಟು ನೋಟುಗಳು ಹಾಳಾಗಿದ್ದವು. ''ಬೇಜಾರು ಮಾಡ್ಕೊಬೇಡಿ, ಅಷ್ಟೊಂದು ಹಣಕ್ಕೆ ಈಗಿನ ದಿನಗಳಲ್ಲಿ ಬೈಸಿಕಲ್ಲೂ ಸಿಗೋದಿಲ್ಲ'' ಎಂದು ಸಮಾಧಾನ ಮಾಡಿ ಕಳಿಸಿದ್ದೆವು.

ಅರೆ! ನಾವೂ ಒಂದಿಷ್ಟು ನೋಟುಗಳನ್ನು ಮಡಕೆಯಲ್ಲಿಟ್ಟು ಹೂತಿಟ್ಟರೆ ಹೇಗೆ? ಹೊಸ ಈ ಐಡಿಯಾವನ್ನು ಶ್ರೀಮತಿಗೆ ಹೇಳಿದೆ. ''ಸರಿ ಹೋಯ್ತು! ನಿಮಗೆ ಸಿಗುವ ಪಿಂಚಣಿ ಹಣದಲ್ಲಿ ಕೋಳಿಗೆ ಕಾಳು ತರೋಕೂ ಆಗ್ತಾ ಇಲ್ಲ. ಬೇಕಿದ್ದರೆ ನೋಟಿನ ಬದಲು ಹತ್ತಾರು ಸಾವಿರ ರೂಪಾಯಿ ಚೆಕ್ ಬರೆದು ಕ್ರಾಸ್ ಮಾಡಿ ಮಡಕೆಯಲ್ಲಿ ಇಡಿ'' ಎಂದಳು.

ಅಷ್ಟು ಹೇಳುತ್ತಲೇ ಅವಳಿಗೇ ಮತ್ತೆಂಥದ್ದೋ ನೆನಪಿಗೆ ಬಂತು. ''ಗೆದ್ದಲು ಸಾಕೋಕೆ ನಿಜಕ್ಕೂ ಮಡಕೆ ವಿಧಾನ ಅಂತ ಒಂದಿದೆ. ನಿಮ್ಮ ಹಳೇ ಕೃಷಿಪತ್ರಿಕೆಯ ಕಂತೆ ತೆಗೀರಿ ತೋರಿಸ್ತೇನೆ'' ಎಂದಳು. ಅದರಲ್ಲೇನಿರುತ್ತದೆ, ಆ ಪತ್ರಿಕೆಗಳನ್ನು ಆಗಲೇ ಗೆದ್ದಲುಗಳೇ ತಿಂದು ಹಾಕಿರಬಹುದು ಎಂದು ನಾನು ಗೊಣಗಿದರೂ ಹಟ ಬಿಡಲಿಲ್ಲ. ಕೊನೆಗೂ ಏಣಿ ತಂದು, ಅಟ್ಟಣಿಗೆ ಏರಿ, ಹಳೇ ಪತ್ರಿಕೆಗಳ ಕಂತೆಗಳನ್ನು ಇಳಿಸಿ ಹುಡುಕಿದರೆ ಅದರಲ್ಲಿ ಸಿಕ್ಕೇ ಬಿಡ್ತು, ''ಗೆದ್ದಲು ಸಾಕಣೆ ವಿಧಿವಿಧಾನ.''

''ತೂತಾದ ಮಡಕೆಯನ್ನು ನೆಲದಲ್ಲಿ ಹೂಳಬೇಕು. ಅದಕ್ಕೆ ನಾಲ್ಕಾರು ಚೂರು ಹಳೇ ಕಟ್ಟಿಗೆ ಇಲ್ಲವೆ ಪ್ಲೈವುಡ್ ಚೂರುಪಾರು, ವೇಸ್ಟ್‌ಪೇಪರ್ ಹಾಕಬೇಕು. ಒಂದಿಷ್ಟು ಸೆಗಣಿ ಹಾಕಿ ನೀರು ಚಿಮುಕಿಸಿ ಇಡಬೇಕು. ಸೆಗಣಿ ತೀರಾ ಮುಖ್ಯ'' ಎಂದು ಅದರಲ್ಲಿ ಬರೆದಿತ್ತು!

ಈಗ ''ಸಿಂಥೆಟಿಕ್ ಸೆಗಣಿಗಾಗಿ'' ಇಂಟರ್‌ನೆಟ್‌ನಲ್ಲಿ ಹುಡುಕಬೇಕೆಂದು ನನ್ನಾಕೆ ಆಜ್ಞೆ ಮಾಡಿದ್ದಾಳೆ.

✵

# ಭಿಕ್ಷೆ ಬೇಡಿದಂತೆ.......

• ಎಚ್. ಗೋಪಾಲಕೃಷ್ಣ

**ಬೆಂ**ಗಳೂರಿನ ಆಟೋ ರಿಕ್ಷಾಗಳನ್ನು ಅವುಗಳ ಸವಾರರನ್ನು ಕುರಿತ ಹಾಗೆ ಇಂಗ್ಲಿಷಿನ ಕೆಲವು ಪತ್ರಿಕೆಗಳಲ್ಲಿ ಬರುವ ಲೇಖನಗಳನ್ನು ಓದುತ್ತಿದ್ದರೆ ನಾವು ಯಾವುದೋ ರಾಕ್ಷಸ ರಾಜ್ಯದಲ್ಲಿ ತಳವೂರಿದ್ದೀವೇನೋ ಅನಿಸುತ್ತದೆ. ಬಹುಶಃ ಈ ಕಾರಣದಿಂದ ನಾನು ರಿಕ್ಷಾಗಳನ್ನು ಆದಷ್ಟೂ ದೂರವಿರಿಸುತ್ತೇನೆ. ಆದರೆ ಮೊನ್ನೆ ಒಂದು ವಿಚಿತ್ರವಾದ ಅನುಭವವಾಯಿತು.

ನಮ್ಮ ಹಾಸ್ಟಲಿನಿಂದ ಸಿಟಿ ಮಾರುಕಟ್ಟೆಗೆ ತುರ್ತಾಗಿ ಹೋಗಬೇಕಿತ್ತು. ನನ್ನ ಸಂಗಡ ವಯಸ್ಸಾಗಿರುವ ಮುದುಕರು ಇದ್ದರು. ಅವರ ಕೆಲಸದ ಬಗ್ಗೆ ಮಾರುಕಟ್ಟೆಗೆ ಹೋಗಬೇಕಿತ್ತು. ರಸ್ತೆಯ ಆ ಕಡೆ ನಿಂತೆವು ಅದು ಸಿಟಿ ಕಡೆಗೆ ಹೋಗುವ ರಸ್ತೆ, ಈ ಕಡೆ ಭಾಗವಾದರೆ ಅದರ ವಿರುದ್ಧ ದಿಕ್ಕಿನಲ್ಲಿ ಹೋಗುವುದು. ರಸ್ತೆಯ ಆ ಕಡೆ ಹೋಗುತ್ತಿರುವ ಹಲವು ರಿಕ್ಷಾಗಳನ್ನು ನಿಲ್ಲಿಸಿ ಅಪ್ಪ ದೊರೆ, ಅಪ್ಪಾ ಮಹಾರಾಜಾ, ಸಿಟಿ ಮಾರುಕಟ್ಟೆಗೆ ಹೋಗಬೇಕು ಬರ್ತೀರಾ ಅಂತ ಗೋಗರೆಯುವ ದನಿಯಲ್ಲಿ ಕೇಳುವುದು, ಅವರು ತಲೆಯಾಡಿಸಿ ಬರೋದಿಲ್ಲ ಎಂದು ಹೋಗುವುದೂ ನಾಲ್ಕೈದು ಬಾರಿ ನಡೆಯಿತು. ಸರಿ ಬನ್ನಿ ಯಾರೂ ಬರೋಲ್ಲ, ಬಸ್ಸಿನಲ್ಲೇ ಹೋಗೋಣಾ ಅಂತ ಮುದುಕರ ಮನವೊಲಿಸಲು ತಯಾರಾದೆ. ನಮ್ಮ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿದ್ದ ರಿಕ್ಷಾ ನಮ್ಮನ್ನು ನೋಡಿತು, ನಮ್ಮ ಪಾಡನ್ನೂ ನೋಡಿತು. ಒಂದು ಯು ಟರ್ನ್ ಮಾಡಿಕೊಂಡು ಬಂದು ನಿಂತಿತು. ನಾವು ಮಾರ್ಕೆಟ್ಟಿಗೆ ಹೋಗಬೇಕು – ನೀವೆಲ್ಲೋ ಆ ಕಡೆ ಹೋಗುತ್ತಿದ್ದಿರಿ... ಅಂದೆ. ಬನ್ನಿ ಸಾರ್ ಮಾರ್ಕೆಟ್ಟಿಗೆ ಬಿಡ್ತೀನಿ ಅಂದ ಮಾರಾಯ!

ನೀವು ಆ ಕಡೆ ಎಲ್ಲಿಗೋ ಹೊಗ್ತಾ ಇದ್ರಲ್ರೀ...

ಊಟಕ್ಕೆ ಹೋಗ್ತಾ ಇದ್ದೆ ಸಾರ್. ನಿಮ್ಮನ್ನ ತಲುಪಿಸಿ ಹೋಗ್ತೀನಿ ಬನ್ನಿ ಅಂತ ಬಲವಂತವಾಗಿ ಹತ್ತಿಸಿಕೊಂಡರು.

ಹತ್ತಿ ಕೂತುಕೊಂಡೆವು. ಮನೆ ಎಲ್ಲಿ ನಿಮ್ಮದು ಅಂತ ಮಾತು ಶುರು ಹಚ್ಚಿದೆ. ನಮ್ಮನ್ನ ಹತ್ತಿಸಿಕೊಂಡ ಜಾಗದಿಂದ ನಾಲ್ಕು ಕಿ.ಮೀ. ಆ ಕಡೆ ಇವರ ಮನೆ ಅಂತ ತಿಳೀತು. ಮಧ್ಯಾಹ್ನ ಎರಡೂವರೆಯಾಗಿದೆ, ಪಾಪ ಈತನ ಊಟ ಕಸಿದೆವಾ ಅನ್ನುವ ಪಾಪ ಕೊರೆಯಲು ಶುರುವಾಯಿತು.

ನಾನು ಬರಬೇಕಾದರೇ ನೋಡಿದೆ ಸಾರ್. ಆರೇಳು ಜನ ರಿಕ್ಷಾದವರು ಬರೋಲ್ಲಾಂತ ಹೋಗಿದ್ದು ನೋಡಿದೆ, ಅದಕ್ಕೇ ನಾನು ಬಂದಿದ್ದು... ನಮಗೇನು ಸಾರ್ ರಿಕ್ಷಾ

ಓಡಿಸೋಕ್ಕೇನೇ ಬಂದಿರೋದು ನಾವು, ನೀವು ಕರೆದ ಕಡೆ ಬರೊಲ್ಲ ಅಂದರೆ ನಾನು ಗಾಡಿ ಯಾಕೆ ಇಟ್ಕೋಬೇಕು, ಆಟೋ ಇರೋದು ಪ್ಯಾಸೆಂಜರಿಗಲ್ಲವಾ?

ತಲೆಯಾಡಿಸಿದೆ.

ನಿಧಾನಕ್ಕೆ ಆತನ ವಿವರ ತಿಳಿದೆ. ಡಿಪ್ಲೊಮಾ ಓದಿದ ನಂತರ ಹೆಚ್.ಎ.ಎಲ್.ನಲ್ಲಿ ತರಬೇತಿ ಪಡೆದನಂತೆ. ಟೂಲ್ ಡಿಸೈನ್‌ನಲ್ಲಿ ಎಕ್ಸ್‌ಪರ್ಟ್ ಅಂತೆ, ಮನೇಲಿ ಹೆಂಡತಿ ಯಾವುದೋ ಸ್ಕೂಲಿನಲ್ಲಿ ಮೇಡಮ್ಮು, ಎರಡು ಮಕ್ಕಳು ಅವೂ ಪ್ರೈಮರಿನಲ್ಲಿ ನರ್ಸರಿನಲ್ಲಿ ಇವೆ. ಸಿಟಿಯಿಂದ ದೂರ ಒಂದು ಚಿಕ್ಕ ಮನೆ ಕಟ್ಟಿಕೊಂಡಿದ್ದಾನೆ, ಸಂಜೆವರೆಗೂ ರಿಕ್ಷಾ ಓಡಿಸೋದು, ಸಂಜೆ ನಂತರ ಟೂಲ್ ಡಿಸೈನ್ ಮಾಡುವುದು, ರಾತ್ರಿ ಮನೆ ಸೇರಿ ಮಕ್ಕಳ ಹೋಂ ವರ್ಕ್ ಮಾಡುವುದು ಹೀಗೆ ಪೂರ್ತಿ ಸಮಯ ಎಂಗೇಜಾಗಿದ್ದಾನೆ. ಯಾವತ್ತೂ ಯಾವ ಪ್ರಯಾಣಿಕರೇ ಕೂಗಲಿ ಬರೋದಿಲ್ಲ ಅಂತ ಹೇಳಿಲ್ಲವಂತೆ ಮತ್ತು ಹೆಚ್ಚಿನ ಚಾರ್ಜು ವಸೂಲಿ ಮಾಡಿಲ್ಲವಂತೆ. ನಮ್ಮ ಕೆಲಸ ಮುಗಿಸುವವರೆಗೂ ಬೇಕಾದರೆ ಇಲ್ಲೇ ಕಾಯ್ತೀನಿ ಸಾರ್ ಅಂದರು.

ಬೇಡಪ್ಪಾ ನೀವು ಹಸಿದಿದ್ದೀರಿ, ನೀವು ಹೋಗಿ ಅಂದೆ.

ಸಾರ್ ಕೆಲಸ ಆದ ಮೇಲೆ ಫೋನು ಮಾಡಿ ಇಲ್ಲೇ ಹತ್ತಿರವೇ ಇದ್ದರೆ ಬರ್ತೀನಿ ಅಂತ ಹೇಳಿ ಫೋನು ನಂಬರು ಕೊಟ್ಟರು.

ಎರಡು ಗಂಟೆ ನಂತರ ನಮ್ಮ ಕೆಲಸ ಮುಗೀತು, ಆತನಿಗೆ ಫೋನು ಮಾಡಿದರೆ ಕಾಲು ಗಂಟೆ ಬರ್ತೀನಿ ಸಾರ್ ಅಂತ ಬಂದರು. ವಾಪಸ್ಸು ನಮ್ಮ ಜಾಗಕ್ಕೇ ಬಿಟ್ಟರು – ಮೀಟರು ಎಷ್ಟು ತೋರಿಸಿತ್ತೋ ಅಷ್ಟೇ ಕಾಸು ತಗೊಂಡು ಮಿಕ್ಕಿದ ಕಾಸು ನೀಡಲು ಬಂದರು.

ಬೇಡ ಇಟ್ಕೊಳ್ರೀ.... ಅಂತ ನನ್ನ ಸಂಗಡವಿದ್ದ ಮುದುಕರು ಹೇಳಿದರು.

ಬೇಡಾ ಸಾರ್, ಹೆಚ್ಚಿಗೆ ದುಡ್ಡು ಇಸಕೊಂಡರೆ ಭಿಕ್ಷೆ ತಗೊಂಡೆ ಅಂತ ಅನಿಸಿಬಿಡುತ್ತೆ ಅದರಿಂದ ನಾನು ಮೀಟರಿನ ಮೇಲೂ ತಗೊಳ್ಳಲ್ಲ, ಅಲ್ಲದೇ ನಾನು ಹೀಗೆ ಮೋಸ ಮಾಡಿ ತಗೊಂಡರೆ ಅದು ನನ್ನ ಮಕ್ಕಳಿಗೆ ಒಳ್ಳೇದು ಮಾಡೊಲ್ಲ ಅಂತ ಭಾವನೆ ಬಂದುಬಿಟ್ಟಿದೆ.... ಅಂದರು! ಅವರ ಗಮನ ರಸ್ತೆಯ ಆ ಪಕ್ಕದಲ್ಲಿ ರಿಕ್ಷಾದವರನ್ನು ಗೋಗರೆಯುತ್ತಿರುವ ಗರ್ಭಿಣಿ ಹೆಂಗಸರ ಸಂಗಡವಿದ್ದ ಮುದುಕಮ್ಮನ ಮೇಲೆ ಹರಿದಿತ್ತು.

ಬೆಂಗಳೂರಿನ ರಿಕ್ಷಾ ಡ್ರೈವರುಗಳಿಗೆ ಈತನನ್ನ ರೋಲ್ ಮಾಡಬಹುದು ಅನ್ನಿಸಿತು. ನಿಮ್ಮ ಹೆಸರು ಏನ್ರೀ ಅಂತ ಕೇಳುವಷ್ಟರಲ್ಲಿ ಆತ ರಸ್ತೆಯ ಆ ಪಕ್ಕದಲ್ಲಿ ಕಾಯುತ್ತಿದ್ದ ಗರ್ಭಿಣಿ ಹೆಂಗಸರನ್ನು ಹತ್ತಿಸಿಕೊಳ್ಳುತ್ತಿದ್ದ !

ನಮ್ಮ ಮಕ್ಕಳನ್ನು ಸರಿಯಾಗಿ ಬೆಳೆಸದಿದ್ದರೆ
ತೊಂದರೆಗೊಳಗಾಗುವವರು ನಮ್ಮ ಮೊಮ್ಮಕ್ಕಳು

# ಊರುಗೋಲು

**• ಶಿವನಾಪುರ ನರಸಿಂಹಮೂರ್ತಿ**

**ನ**ನಗೂ ನನ್ನ ಮಡದಿ ಪದ್ಮಳಿಗೂ ಮೂರೇ ವರುಷದ ಅಂತರವಿತ್ತಾದರೂ, ನಾನು ಹೆಚ್ಚು ವಯಸ್ಸಾದಂತೆ ಕಾಣುತ್ತಿದ್ದೆ. ಮ್ಯಾಚಿಂಗ್ ಬ್ಲೌಸ್ – ಸೀರೆ, ಕಡು ಕಪ್ಪಾದ ತಲೆ ಕೂದಲಿಂದ ಪದ್ಮ ನಡು ಪ್ರಾಯದ ಹೆಣ್ಣಿನಂತಿದ್ದರೆ, ಬಿಳುಪಾದ ಕೂದಲು, ಅರ್ಧ ಬರಿದಾದ ತಲೆ, ಜೊತೆಗೆ ಹಾಳಾದ ಸೋಡಾ ಗ್ಲಾಸ್ ಕನ್ನಡಕದಿಂದ ನಾನು ಮುದುಕನಂತಾಗಿದ್ದೆ.

ಪದ್ಮಳ ಕಡೆಯ ನೆಂಟರು ಅವಳ ಪಕ್ಕ ಕೂತೋ, ನಿಂತೋ ಇದ್ದ ನನ್ನನ್ನು ಒಂದು ಥರಾ ಅಣಕದ ನೋಟದಿಂದ ನೋಡುತ್ತಿದ್ದರು. ಒಮ್ಮೆ ಮದುವೆ ಆರತಕ್ಷತೆಯಲ್ಲಿ ''ಈ ಅಜ್ಜ ಯಾರು ಅಂತ ಕೇಳಿದಾಗ ನನ್ನ ಹೆಂಡತಿ ''ಇವರು ನನ್ನ ಮಗನ ಅಪ್ಪ'' ಎಂದು ನನ್ನತ್ತ ವಾರೆನೋಟ ಹರಿಸಿದ್ದಳು. ಅಂದಿನಿಂದ ಇವಳು ಮುಂದೆ ಇದ್ದರೆ ನಾನು ಐದು ಹತ್ತು ಹೆಜ್ಜೆ ಹಿಂದೆ ನಿಧಾನವಾಗಿ ನಡೆಯುತ್ತಿದ್ದೆ. ಬಸ್ಸಿನಲ್ಲಿ ಅವಳು ಲೇಡೀಸ್ ಸೀಟಿನಲ್ಲಿದ್ದರೆ ನಾನು ಸೀನಿಯರ್ ಸಿಟಿಜನ್ ಸೀಟಿನಲ್ಲಿ ಒಂಟಿಯಾಗಿಯೇ ಆಸೀನನಾಗುತ್ತಿದ್ದೆ.

**''ಈ ಅಜ್ಜ ಯಾರು?'' ಎಂದಾಗ ನನ್ನ ಹೆಂಡತಿ 'ಇವರು ನನ್ನ ಮಗನ ಅಪ್ಪ' ಎಂದಳು!**

ಮದುವೆ ಮನೆಯಾಗಲಿ, ಹುಟ್ಟುಹಬ್ಬವಾಗಲಿ ನಾನು ಎಚ್ಚರ ವಹಿಸಿ ಪದ್ಮಳಿಂದ ಸಾಕಷ್ಟು ಅಂತರ ಕಾಪಾಡಿ ಕೊಳ್ಳುತ್ತಿದ್ದೆ. ಏನೆಲ್ಲಾ ಸರ್ಕಸ್ ಮಾಡಿದರೂ ನನ್ನ ಮಗ, ಸೊಸೆ ಬಿಟ್ಟು ಉಳಿದವರಿಗೆಲ್ಲಾ ಇವಳು ಆಂಟಿಯಾದರೆ ನಾನು ತಾತನೇ ಆಗಿದ್ದೆ. ಅಪ್ಪಿತಪ್ಪಿ ಯಾರಾದರೂ 'ಅಂಕಲ್' ಅಂದರೆ ಸಾಕ್ಷಾತ್ ಹನುಮನೇ ಪ್ರಸಾದ ಕೊಟ್ಟ ಹಾಗಾಗುತ್ತಿತ್ತು. ಒಬ್ಬನೇ ಕುಲೋದ್ಧಾರಕನಿದ್ದು ಪ್ರಾಯದಲ್ಲಿ ಅಂತರ ಕಾಪಾಡಿಕೊಳ್ಳಬೇಕಾದ ಅನಿವಾರ್ಯತೆ ಇಲ್ಲದ್ದು ಈಗ ನಮ್ಮ ನಡುವೆ ನಿರಂತರ ಅಂತರ ತಾನಾಗಿಯೇ ಒದಗಿ ಬಂದಿತ್ತು. ಮಗ ಕಿರಣ, ಸೊಸೆ ಕಾವ್ಯ ''ಅಪ್ಪ ನೀವು ವಿದೇಶಕ್ಕೆ ಹೋಗಿ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡು ಯುವಕರಂತಾಗಿ'' ಎಂದು ರೇಗಿಸುತ್ತಿದ್ದರು.

ಈ ಎಲ್ಲ ಸಂಕಟಗಳಿಂದ ಮುಕ್ತನಾಗಲು ಪದ್ಮಳಿಗೆ ಕನ್ನಡಕ ಧರಿಸು, ಮ್ಯಾಚಿಂಗ್ ಸೀರೆ ಬ್ಲೌಸ್ ಬಿಟ್ಟು, ಮಾಮೂಲಿ ಸೀರೆಗಳೇ ಉಡುವಂತೆ ಆಜ್ಞಾಪಿಸಿದೆ. ''ಹೋಗ್ರಿ ಹೋಗ್ರಿ ನಾನು ಒಂದ್ ದಿನ ಮುದುಕಿ ಥರಾ ಆಗೇ ಆಗ್ತೀನಿ. ಈಗ್ಲೆ ಯಾಕೆ ಇಲ್ಲದ್ದನ್ನು ಬಯಸಿ ಕಾಲಮೇಲೆ ನಾನೇ ಏಕೆ ಕಲ್ಲು ಎಳೆದುಕೊಳ್ಳಲಿ'' ಎಂದು ರೇಗಿಬಿಟ್ಟಳು. ಕಾವ್ಯಳಂತು ''ಅಪ್ಪ, ಅಜ್ಜ ಅನ್ನೊ ಹಿರಿತನದ ಪದವೀನಾ ಯಾಕೆ ಬೇಡ ಅಂತೀರಾ. ದೇವರು ತಾನಾಗಿಯೇ ಕೊಟ್ಟ ವರ ಬೇಡ ಅನ್ನಬಾರ್ದು'' ಎಂದು ಉಪ್ಪು ಖಾರ ಹಾಕಿದಳು.

ತಲೆ ತಿನ್ನುತ್ತಿರುವ ಮುದಿತನದ ತಲೆನೋವನ್ನ ಗೆಳೆಯ ವೆಂಕಟೇಶನಲ್ಲಿ ಹೇಳಿಕೊಂಡಾಗ, ''ಈ ಪಂಚೆ ಜುಬ್ಬ ಎಲ್ಲ ಬಿಟ್ಟು, ಪ್ಯಾಂಟು ಷರಟು ಹಾಕ್ಕೊ. ತಲೆಗೆ ಒಂದು ವಿಗ್ ಧರಿಸು, ಸಮಾರಂಭ ನಡೆಯುವ ಸ್ಥಳದ ಮೆಟ್ಟಿಲಲ್ಲಿ ಕನ್ನಡಕ ತೆಗೆದು ಹೆಜ್ಜೆ ಹಾಕು ಹೀಗೆ'' ಏನೇನೊ ಪ್ಲಾನ್ ಹೇಳಿಕೊಟ್ಟ, ಮುಳುಗುತ್ತಿದ್ದವನಿಗೆ ಹುಲ್ಲುಕಡ್ಡಿಯೇ ಆಸರೆಯಾದಂತೆ ವೆಂಕಟೇಶನ ಮಾತುಗಳೇ ನನಗೆ ವೇದಾಂತವಾಯಿತು.

ಪದ್ಮಳ ಚಿಕ್ಕ ಅತ್ತೆ ಮೊಮ್ಮಗನ ಹುಟ್ಟುಹಬ್ಬದ ಕರೆ ಓಲೆ ಬಂದಿತ್ತು. ವೆಂಕಟೇಶನ ಸಲಹೆಯ ಪ್ರತಿ ಅಕ್ಷರಗಳನ್ನೂ ಅನುಸರಿಸಲು ನಿರ್ಧರಿಸಿ, ಕಾವ್ಯ, ಪದ್ಮ ದೇವಸ್ಥಾನಕ್ಕೆ ಹೋಗಿದ್ದ ಸಮಯದಲ್ಲಿ ರೆಡಿಮೇಡ್ ಬಟ್ಟೆ ಅಂಗಡಿಯತ್ತ ದೌಡಾಯಿಸಿದೆ. ನನ್ನ ಸೊಂಟದ ಸೈಜ್ ಟೇಪ್‌ನಲ್ಲಿ ಅಳೆದುಕೊಂಡು ಪ್ಯಾಂಟು ಕೊಟ್ಟ, ಅದಕ್ಕೇ ಮ್ಯಾಚಿಂಗ್ ಷರಟೂ ಕೊಟ್ಟು ಒಂದೂವರೆ ಸಾವಿರದ ಬಿಲ್ ಕೈಲಿಟ್ಟಾಗ, ಹಣ ಎಣಿಸಿ ಬಾಯಿ ಮುಚ್ಚಿಕೊಂಡು (ಕಟ್ಟಿಸಿದ ಹಲ್ಲುಗಳು) ಮನೆಯ ಹಾದಿ ಹಿಡಿದೆ. ಜೇಬಿನಲ್ಲಿ ಬರೀ ಹನ್ನೆರಡು ರೂಪಾಯಿ ಉಳಿದು ವಿಗ್ ಕೊಳ್ಳಲಾಗದೆ ಸುಮ್ಮನಾಗಬೇಕಾಯ್ತು.

ತಲೆ ನೋವು ಡಾಕ್ಟರ್‌ಗೆ ತೋರಿಸಿಕೊಂಡು ನೇರವಾಗಿ ಹುಟ್ಟು ಹಬ್ಬಕ್ಕೆ ಬರುವುದಾಗಿ ನೆಪ ಹೇಳಿ ಹೆಂಡತಿ, ಮಗ, ಸೊಸೆಯನ್ನು ಕಳುಹಿಸಿದೆ. ವೆಂಕಟೇಶನ ಒಂದೊಂದೆ ಸಲಹೆಗಳನ್ನು ನೆನಪು ಮಾಡಿಕೊಳ್ಳುತ್ತಾ ಪ್ಯಾಂಟು, ಷರಟು ಧರಿಸಿ ಸಂಭ್ರಮದಿಂದ ಸಮಾರಂಭದ ಜಾಗಕ್ಕೆ ಆಟೊ ಹಿಡಿದು ಹೊರಟೆ. ವಿಗ್ ಇಲ್ಲದಿದ್ದರೆ ಬೇಡ ಗೆಳೆಯನ ಕಡೆಯ ಮಾತಿನಂತಾದರೂ ನಡೆದುಕೊಳ್ಳುವ ಅನ್ನಿಸಿ, ಕನ್ನಡಕ ತೆಗೆದು ಜೇಬಿಗಿಟ್ಟು ಸಮಾರಂಭದ ಮನೆ ಪ್ರವೇಶಿಸಿದೆ. ಬಾಗಿಲಲ್ಲೇ ಸ್ವಾಗತಿಸಿದ ಕಾವ್ಯಳ ಚಿಕ್ಕಮಾವ ''ಓ! ರಾಯ್ರೆ, ಬನ್ನಿ ಬನ್ನಿ ಈ ಡ್ರೆಸ್‌ನಲ್ಲಿ ತುಂಬಾ ಯಂಗ್ ಆಗಿ ಕಾಣಿಸ್ತೀರ'' ಅಂದಾಗ ವೀರಸೇನಾನಿಯ ಭಾವವಿತ್ತು. ಮಡದಿಯತ್ತ ತೂರಿಬಿಟ್ಟೆ ನನ್ನ ನೋಟದಲ್ಲಿ.

ಬಫೆ ಮಾದರಿಯ ಊಟ ಏರ್ಪಾಟಿದ್ದ ಹಾಲಿನ ಕಡೆ ಎಲ್ಲರೊಡನೆ ನಡೆದೆ. ಐಸ್‌ಕ್ರೀಮ್ ಚೆಲ್ಲಿದ್ದ ಸಿಮೆಂಟ್ ನೆಲದ ಮೇಲೆ ಕಾಲಿಟ್ಟಾಗ ಜಾರಿಬಿದ್ದು ಜೇಬಿನಲ್ಲಿರಿಸಿದ್ದ ಕನ್ನಡಕದ ಗಾಜುಗಳು ನಾಲ್ಕೂ ದಿಕ್ಕಿಗೆ ಪುಡಿಪುಡಿಯಾಗಿ ಚದುರಿದವು. ಸರ್ರನೆ ಧಾವಿಸಿ ಬಂದ ಕಿರಣ, ಕಾವ್ಯ ನನ್ನನ್ನು ಎತ್ತಿಕೂಡಿಸಿದರು. ''ಅವತ್‌ನಿಂದ ಹೇಳ್ತಾ ಇದೀನಿ ಒಂದು ಊರುಗೋಲು ಕೈಲಿ ಇಟ್ಕೊಳ್ಳಿ ಅಂತ, ನೀವ್ ಎಲ್ಲಿ ಕೇಳ್ತೀರಿ ಎಂದು ಗದರಿಕೊಂಡ.'' ಪದ್ಮ ಮನೆಗೆ ಹೋದಮೇಲೆ ನಿಮ್ಮಪ್ಪನಿಗೆ ''ನಿನ್ನ ಮದುವೆ ಕಾಶಿಯಾತ್ರೇಲಿ ಕೊಟ್ಟ ಸ್ಟಿಕ್ ತಂದು ಕೊಡೊ'' ಎಂದು ಕಿರಣನಿಗೆ ಆಜ್ಞಾಪಿಸಿದಳು.

✵

**ಆನಂದಕ್ಕಿಂತ ಆಶ್ಚರ್ಯಕರವಾದ ವಸ್ತು ಬೇರೊಂದಿಲ್ಲ.**
**ಖರ್ಚು ಮಾಡಿದಷ್ಟೂ ಹೆಚ್ಚು ಹೆಚ್ಚುತ್ತಾ ಅದು**
**ನಿಮ್ಮ ಬಳಿ ಉಳಿಯುತ್ತದೆ.**

# ಮಿಲ್ಕ್ ಪ್ರೊಡ್ಯೂಸಿಂಗ್ ಮೆಷೀನು

• ಗುರು

**ನ**ನ್ನ ಅನುಭವಗಳನ್ನು ಓದುತ್ತಿರುವ ಗೆಳೆಯರೊಬ್ಬರು ಮೊನ್ನೆ ಒಂದು ರೀತಿಯ ಕುತೂಹಲದಿಂದ ಒಂದು ಸಂಗತಿ ಕೇಳಿದರು – ಅಲ್ಲವೋ ಮಾರಾಯಾ ಬರೀ ಕಾರ್ಖಾನೆ ಹೊರಗಡೆಯ ಅನುಭವಗಳನ್ನೇ ಹೇಳ್ತಾ ಇದ್ದೀ ಇನ್ನೂ ನೀನು ನಿಮ್ಮ ಕಾರ್ಖಾನೆ ಒಳಗೆ ಬಂದೇ ಇಲ್ಲ ಗೊತ್ತಾ? ಅಂತ – ಅಯ್ಯೋ ಹೌದಾ ಇವರೇ ಮುಂದಿನ ಬಾರಿ ಒಳಗೆ ನುಗ್ತೀನಿ ಕೊಂಚ ಇರಿ ಅಂತ ಹೇಳಿದೆ. ಇಗೋ ಈಗ ನಿಮ್ಮನ್ನು ಒಳಾವರಣದ ಅನುಭವಗಳತ್ತ ಒಯ್ತಾ ಇದೀನಿ.

ನಾನು ಫ್ಯಾಬ್ರಿಕೇಷನ್ ಹ್ಯಾಂಗರಿನಲ್ಲಿ ಕೆಲಸ ಆರಂಭಿಸಿದ್ದು. ಅದರಲ್ಲೋ ಹಲವಾರು ರೀತಿಯ ದೈತ್ಯಾಕಾರದ ಮೆಷೀನುಗಳು, ಒಂದೊಂದೂ ಬೇರೆಬೇರೆ ರೀತಿಯ ಕೆಲಸ ಮಾಡಲು ಎಂದೇ ನಿಯೋಜಿತವಾಗಿದ್ದವು. ನೋಡಿದರೆ ಹೆದರಿಕೆ ಹುಟ್ಟಲೇಬೇಕು ಹಾಗಿತ್ತು ಅವುಗಳ ಹೊರನೋಟ ಹಾಗೂ ಅವು ಮಾಡುತ್ತಿದ್ದಂತಹ ಕಾರ್ಯಗಳು. ನನ್ನಷ್ಟು, ನಿಮ್ಮಷ್ಟು ದಪ್ಪನಾಗಿರುವ ಕಬ್ಬಿಣದ ತೊಲೆಯನ್ನು ಮೆಷೀನಿನ ಹಾಸಿಗೆ ಮೇಲಿರಿಸಿ ಸ್ವಿಚ್ ಚಾಲನೆ ಮಾಡಿದರೆ ಸಾಕು ಹತ್ತು ನಿಮಿಷದಲ್ಲಿ ಸ್ಕೇಲಿನ ದಪ್ಪಕ್ಕೆ ಮೆಷೀನು ನಿಮ್ಮನ್ನ ತಂದುಬಿಡುತ್ತಿತ್ತು. (ಮೆಷೀನಿನ ಮೇಲೆ ವಸ್ತುಗಳನ್ನು ಇಟ್ಟು ಆಪರೇಷನ್ ನಡೆಸುವ ಜಾಗಕ್ಕೆ ಬೆಡ್ ಎಂದು ಹೆಸರು.) ಇದೇ ರೀತಿಯ ಹಲವಾರು ವೈವಿಧ್ಯಮಯ ಯಂತ್ರಗಳು ಕಾರ್ಯಾಗಾರದಲ್ಲಿ, ಕಾರ್ಖಾನೆಗಳಲ್ಲಿ ಸರ್ವರಿಗೂ ಅನ್ವಯವಾಗುವ ಸೂಚನೆ ಎಂದರೆ ಯಾವಾಗಲೂ ಯಂತ್ರಗಳ ಬಳಿಯಲ್ಲಿ ಯಾರೊ ಮೇಲ್ವಿಚಾರಕರು ಇಲ್ಲದೇ ಇರುವ ಸಮಯದಲ್ಲಿ ಸುಳಿದಾಡಬೇಡಿ, ಕೋತಿಚೇಷ್ಟೆ ಮಾಡಬೇಡಿ, ಮೆಷೀನು ಚಾಲಿಸಲು ಹೋಗಬೇಡಿ.... ಹೀಗೆ. ಏನು ಮಾಡಬೇಡಿ ಅಂತ ಹೇಳುತ್ತಾರೋ ಅದನ್ನೇ ತಾನೇ ನಾವು ಮಾಡುವುದು? (ಕಳ್ಳತನ ಮಾಡಬೇಡಿ ಎಂದರೆ ಕಳ್ಳತನ ಮಾಡುತ್ತೇವೆ, ಸುಳ್ಳು ಹೇಳಬೇಡಿ ಎಂದರೆ ಸುಳ್ಳು ಹೇಳುತ್ತೇವೆ....) ಯಾರೋ ಮುರಿದಿರುವ ಹ್ಯಾಕ್ಸಾ ಬ್ಲೇಡಿನಲ್ಲಿ ಚಾಕು ಮಾಡುವುದನ್ನು ನೋಡಿದ ಒಬ್ಬ ನಮ್ಮ ಜತೆಯವನು ಇವನೂ ಚಾಕು ಮಾಡಲು ಹೋದ. ಸಾಣೆ ಹಿಡಿಯುವ ಮೆಷೀನು ಹತ್ತಿರದಲ್ಲಿಯೇ ಇತ್ತು. ಅದೇ ತಾನೇ ಯಾರೋ ಮೆಷೀನು ಚಾಲೂ ಮಾಡಿ ಹೋಗಿದ್ದರು. ಮುರಿದಿರುವ ಬ್ಲೇಡನ್ನು ಹಿಡಿದು ಇವನು ಮೆಷೀನಿನ ಹತ್ತಿರಕ್ಕೆ ನಡೆದು ಬಲಗೈನಲ್ಲಿದ್ದ ಬ್ಲೇಡನ್ನು ತಿರುಗುತ್ತಿರುವ ಸಾಣೆ ಚಕ್ರಕ್ಕೆ ಕೊಟ್ಟ. ಒಂದೇ ಸೆಕೆಂಡಿನಲ್ಲಿ ಇವನ ಕೈನಿಂದ ಬ್ಲೇಡನ್ನು ಕಸಿದುಕೊಂಡ ಯಂತ್ರ ಅದನ್ನು ರೊಯ್ಯನೆ ಎಸೆಯಿತು. ಸುತ್ತ ಮುತ್ತಲೂ ಅವರವರ ಕೆಲಸದಲ್ಲಿ ತಲ್ಲೀನರಾಗಿದ್ದ ಉದ್ಯೋಗಿಗಳು, ಬ್ಲೇಡು ಯಾರ ಕಣ್ಣಿಗೋ ಮೈಯಿಗೋ ತಗುಲಿದ್ದರೆ ಕಣ್ಣೇ ಹೋಗಬಹುದಾಗಿದ್ದ ಅಥವಾ ಪ್ರಾಣವೇ ಹೋಗಿಬಿಡುವ

ಸಂದರ್ಭ. ಆದರೆ ಬ್ಲೇಡು ತಾರಸಿಗೆ ತಗುಲಿ ಅಲ್ಲೇ ಚಿಪ್ಪಾನು ಚೂರು ಆಗಿ ಇಡೀ ಹ್ಯಾಂಗರಿನ ತುಂಬಾ ದೊಡ್ಡ ಶಬ್ದ ಮಾಡಿತು. ಯಾರಿಗೂ ಏನೂ ಅಪಾಯವಾಗಲಿಲ್ಲ! ಆದರೂ ಇವನನ್ನು ಕರೆದು ಪ್ರತಿಯೊಬ್ಬರೂ ಬುದ್ದಿ ಹೇಳುವವರೇ: ಗೊತ್ತಿಲ್ಲದಿರುವ ಕೆಲಸಕ್ಕೆ ಕೈ ಹಾಕಬಾರದು, ಅದೇನು ಬೀ ಎಸ್ಸೀ ಓದಿದೀರೀ, ಒಂದು ಬ್ಲೇಡು ಹಿಡಿಯೋಕ್ಕೆ ಬರೊಲ್ಲವೇ ಅಂತ ಹೀಯಾಳಿಕೆ ಬೇರೆ ! ನಮಗೆ ಕಾಲೇಜಿನಲ್ಲಿ ಬ್ಲೇಡು ಹಿಡಿಯೋದು ಹೇಳಿಕೊಟ್ಟಿಲ್ಲ ಅಂತ ಹೇಳಿ ಬಚಾವಾಗಲು ಸಾಧ್ಯವೇ?

ಇದು ನಮ್ಮ ಕತೆಯಾದರೆ ಆಗತಾನೇ ಇಂಜಿನಿಯರಿಂಗ್ ಮುಗಿಸಿ ಒಬ್ಬರು ಕಾರ್ಖಾನೆಗೆ ಸೇರಿದ್ದರು. ಇದೇ ರೀತಿಯ ಗ್ರೈಂಡಿಂಗ್ ಮೆಷೀನು ಕೆಲಸ ಮಾಡುತ್ತಿದೆ. ಅದರ ಆಪರೇಟರು ಬೀಡಿ ಸೇದಲೋ ಏನೋ ಅಲ್ಲಿಂದ ನಾಪತ್ತೆಯಾಗಿದ್ದ. ಹೊಸಾ ಇಂಜಿನಿಯರು ಮೆಷೀನಿನ ಹತ್ತಿರಕ್ಕೆ ಹೋಗಿ ಬಗ್ಗಿ ನೋಡಿದ. ಸಾಣೆಚಕ್ರ ನಿಮಿಷಕ್ಕೆ 8 ರಿಂದ 16 ಸಾವಿರ ಸುತ್ತು ತಿರುಗುವ ಸಾಮರ್ಥ್ಯದಲ್ಲಿ ಮೆಷೀನಿಗೆ ಅಳವಡಿಕೆಯಾಗಿತ್ತು. ಆ ವೇಗದಲ್ಲಿ ಯಾವುದೇ ವಸ್ತು ಸುತ್ತುತ್ತಿದ್ದರೂ ನಿಶ್ಚಲವಾಗಿರುವಂತೆ ತೋರುತ್ತದೆ. (ನಿಮ್ಮ ಹೈಸ್ಕೂಲಿನ ದಿನಗಳಲ್ಲಿ ನಿಮಗೆ ನ್ಯೂಟನ್ ಚಕ್ರವೊಂದನ್ನು ಉದಾಹರಣೆಯಾಗಿ ನಿಮ್ಮ ಮೇಷ್ಟ್ರು ತೋರಿಸಿದ್ದು ನೆನಪು ಉಂಟು ತಾನೇ? ಏಳು ಬಣ್ಣಗಳಿರುವ ಚಕ್ರವೊಂದನ್ನು ಗಿರ ಗಿರ ಅಂತ ಜೋರಾಗಿ ತಿರುಗಿಸಿದಾಗ ಅದು ತಿರುಗುತ್ತಿರಬೇಕಾದರೆ ನಿಮಗೆ ಏಳು ಬಣ್ಣ ಕಾಣುವುದಿಲ್ಲ, ಬದಲಿಗೆ ಬರಿಯ ಬಿಳಿಯ ಬಣ್ಣ ಮಾತ್ರಾ ಗೋಚರಿಸುತ್ತದೆ - ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಯಿತು ಎಂದು ತೋರಿಸಲು ಈ ಪ್ರಯೋಗ. ಚಕ್ರ ತಿರುಗುವ ವೇಗ ಹೆಚ್ಚಿದರೆ ಅದು ಸುಮ್ಮನೆ ಚಲನೆಯೇ ಇಲ್ಲದೆ ನಿಂತಹಾಗೇ ತೋರುತ್ತದೆ.) ಪಾಪ ಹೊಸಾ ಇಂಜಿನಿಯರಿಗೂ ಹಾಗೇ ತೋರಿತು. ಮೆಷೀನಿನ ಸುತ್ತಲೂ ಎರಡು ಸುತ್ತು ಬಂದ ಅದರ ಸ್ವಿಚ್ಚು ನೋಡಿದ, ಅದರ ಭಾಗಗಳನ್ನು ನೋಡಿದ. ಬಿಳಿಯ ಬಣ್ಣದ ಚಕ್ರ ಅಳವಡಿಕೆಯಾಗಿತ್ತು. ಅದನ್ನೂ ನೋಡಿದ. ಬಿಳೀ ಬಣ್ಣದ ಆಕರ್ಷಣೆ ನೋಡಿ, ಅದನ್ನು ಮುಟ್ಟಲೇಬೇಕು ಅನ್ನಿಸುತ್ತೆ ಮತ್ತು ಸಾಧ್ಯವಾದರೆ ಮನೆಯಲ್ಲಿ ಇಟ್ಟುಕೋ ಬೇಕೂಂತಲೂ ಅನ್ನಿಸುತ್ತೆ. ಹುಡುಗರು ಬಿಳಿ ಹೆಂಡತಿ ಬೇಕು ಎನ್ನುವುದಕ್ಕೂ ಹುಡುಗಿಯರು ಬೆಳ್ಳಗೆ ಇಲ್ಲದಿರುವ ಹುಡುಗರನ್ನು ಫ್ರೆಂಡ್ ಮಾಡಿಕೊಳ್ಳದಿರುವುದೂ ಇದೇ ಕಾರಣಕ್ಕೆ ! ಅಷ್ಟು ಹೊತ್ತಿಗೆ ಆಪರೇಟರ್ ಬಂದ. ಆತನನ್ನ ಇಂಜಿನಿಯರು ಮೆಷೀನಿನ ಬಗ್ಗೆ ಕೇಳಿದ. ತಿರುಗುತ್ತಿರುವ ಚಕ್ರವನ್ನು ಆಪರೇಟರಿನ ಸಂಗಡ ಮಾತು ಆಡುತ್ತಲೇ ತೋರುಬೆರಳಿನಿಂದ ಸವರಲು ಪ್ರಯತ್ನಿಸಿದ ! ಅಷ್ಟೇ... ತೋರುಬೆರಳು ಐದು ಮಿಮಿ ಯಷ್ಟು ಕಿತ್ತು ರಕ್ತ ಮೇಲೆ ಹಾರಿತು ಹಾಗೂ ಇಂಜಿನಿಯರು ಒಂದು ತಿಂಗಳು ಆಸ್ಪತ್ರೆಯಲ್ಲಿದ್ದು ಬಂದ. ಅವನ ಬೆರಳು ಸೊಟ್ಟವಾಗಿ ಸೊಟ್ಟ ಸೋಮಣ್ಣ ಅಂತ ಅವನು ಲೆಜೆಂಡ್ ಆಗಿದ್ದ. ರಿಟೈರು ಆಗಬೇಕಾದರೂ ಅವನ ಬೆರಳು ಸೊಟ್ಟಕ್ಕೇ ಇತ್ತು !

ಇದಕ್ಕೆ ಸಂಬಂಧಿಸಿದ ಹಾಗೇ ಮತ್ತೊಂದು ನೈಜ ಸಂಗತಿ ನಿಮಗೆ ಹೇಳಬೇಕು. ಕಬ್ಬಿಣ ಅಥವಾ ಸ್ಟೀಲನ್ನು ಕುಯ್ಯಬೇಕಾದರೆ, ಸಿಗಿಯಬೇಕಾದರೆ, ರಂಧ್ರಿಸಬೇಕಾದರೆ ಒಂದು

ವಿಶೇಷವಾದ ಆಯಿಲ್ಲನ್ನು ಉಪಯೋಗಿಸುತ್ತೇವೆ – ಅದಕ್ಕೆ ಕಾರ್ಖಾನೆ ಪರಿಭಾಷೆಯಲ್ಲಿ ಕೂಲೆಂಟ್ ಎಂದು ಕರೆಯುತ್ತೇವೆ. ಹೆಚ್ಚು ಉಷ್ಣಾಂಶದಲ್ಲಿರುವ ವಸ್ತು ಕೊಂಚ ಮಟ್ಟಿಗೆ ತಣ್ಣಗಿರುವಂತೆ ಹಾಗೂ ಸುಸೂತ್ರವಾಗಿ ಮೆಷೀನಿಂಗ್ ಕೆಲಸಗಳು ನಡೆಯಬೇಕಿದ್ದರೆ ಈ ಕೂಲೆಂಟ್ ಅತ್ಯವಶ್ಯಕ. ಮೆಷೀನಿನ ಮೇಲಿನ ಭಾಗದಿಂದ ಇದು ನಲ್ಲಿಯಲ್ಲಿ ನೀರು ಬಂದ ಹಾಗೆ ಸುರಿಯುತ್ತಿರುತ್ತದೆ ಮತ್ತು ಹಾಗೇ ನೋಡಿದರೆ ನಲ್ಲಿಯಲ್ಲಿ ಹಾಲು ಸುರಿಯುತ್ತಿರುವ ಹಾಗೆ ತೋರುತ್ತದೆ. ನೀವು ಸೀದಾ ಕಾಲೇಜಿನಿಂದ ಕಾರ್ಖಾನೆಗೆ ಬಂದಿರುವವರಾದರೆ ಕೂಲೆಂಟ್ ದ್ರವವನ್ನು ಹಾಲು ಎಂತಲೇ ತಿಳಿಯಬೇಕು – ಹಾಗೆ ಎರಡರ ನಡುವಿನ ವ್ಯತ್ಯಾಸ ಮೇಲು ನೋಟಕ್ಕೆ ತೋರುವುದಿಲ್ಲ. ಬೆಳ್ಳಗಿರುವುದೆಲ್ಲಾ ಹಾಲಲ್ಲ ಎಂದು ನಿಮಗೆ ತಿಳಿದೂ ಇರುವುದಿಲ್ಲ !

ಎಮರ್ಜೆನ್ಸಿ ಮುಗಿದು ಜನತಾ ಸರ್ಕಾರ ಅಧಿಕಾರಕ್ಕೆ ಬಂತಲ್ಲಾ ? ಆಗ ರಾಜನಾರಾಯಣ್ ಎಂಬುವವರು ಮಂತ್ರಿಯಾಗಿದ್ದರು. ನಮ್ಮ ಲಾಲೂ ಪ್ರಸಾದರ ಹಾಗೆ ಈತನೂ ಸಹ ಒಂದು ವರ್ಣ ರಂಜಿತ ವ್ಯಕ್ತಿ ಅದೇ ರೀತಿಯ ಕ್ರೌಡ್ ಪುಲ್ಲಿಂಗ್ ಮತ್ತು ಹಾಗೇ ಭಾಷಣ ಬಿಗಿಯುವ ಐಲು ಐಲು ಸ್ವಭಾವದವರು. ಅವರು ವಿದೇಶ ಪ್ರವಾಸಕ್ಕೆ ಹೋಗಿದ್ದರು. ಅಲ್ಲಿ ಅವರಿಗೆ ಒಂದು ಉತ್ಪಾದನಾ ಕಾರ್ಯಾಗಾರವನ್ನು ಅಲ್ಲಿನ ಹಿರಿಯ ಅಧಿಕಾರಿಗಳು ತೋರಿಸುತ್ತಿದ್ದರಂತೆ. ಅಲ್ಲಿ ಒಂದು ಮೆಷೀನಿನಲ್ಲಿ ಕೂಲೆಂಟ್ ಹರಿದು ಬರುತ್ತಿತ್ತು. ಅದನ್ನು ರಾಜನಾರಾಯಣ್ ನೋಡಿದರು. ಬಡ ಭಾರತದಲ್ಲಿ ಮಕ್ಕಳು ಹಾಲಿಗೋಸ್ಕರ ಪಡುವ ಪರಿಪಾಡು ಅವರ ಕಣ್ಣಿನೆದುರು ಬಂದಿತು. ಕೂಡಲೇ ಅವರು ಅವರ ಪಿ.ಎ. ಕರೆದರಂತೆ – ನೋಡು ನಾವು ನಮ್ಮ ದೇಶಕ್ಕೆ ಹೋಗುವ ಮೊದಲು ಈ ರೀತಿಯ ಮೆಷೀನು – ಎಷ್ಟು ಸಾಧ್ಯವೋ ಅಷ್ಟು ನಮ್ಮ ದೇಶ ಸೇರಿರಬೇಕು. ಎಷ್ಟು ಚೆನ್ನಾಗಿ ಗಟ್ಟಿಯಾಗಿರುವ ಹಾಲು ತಯಾರಿಸುವ ಮೆಷೀನು ಇಲ್ಲಿದೆ, ಇದನ್ನು ತೆಗೆದುಕೊಂಡು ಹೋಗಿ ನಮ್ಮ ದೇಶದಲ್ಲಿ ಮಕ್ಕಳ ಹಾಲಿನ ಅಭಾವವನ್ನು ನೀಗಿಸೋಣ....!

ಪಿ.ಎ. ಸರಿ ಸಾರ್ ಅಂದನಂತೆ. ಮಂತ್ರಿಗಳು ಈತನ ಸಂಗಡ ಹಿಂದಿಭಾಷೆಯಲ್ಲಿ ಮಾತನಾಡಿದ್ದರು – ಎಲ್ಲ ಉತ್ತರ ಭಾರತೀಯರಂತೆ ಅವರಿಗೆ ಇಂಗ್ಲಿಷಿನ ಮೇಲೆ ಅಪಾರವಾದ ದ್ವೇಷವಿತ್ತು. ಮಂತ್ರಿಗಳು ಹೋಟೆಲ್ಲಿನ ರೂಮಿಗೆ ಹಿಂತಿರುಗಿದ ನಂತರ ಪಿ.ಎ. ಅವರ ಬಳಿ ಹೋಗಿ ಸಾರ್, ಅದು ಹಾಲು ತಯಾರಿಸುವ ಯಂತ್ರವಲ್ಲ, ಅದು ಕೂಲೆಂಟು... ಲೋಹ ಕುಯ್ಯಬೇಕಾದರೆ ಉಂಟಾಗುವ ಉಷ್ಣತೆಯನ್ನು ತಗ್ಗಿಸಲು ಅದನ್ನು ಉಪಯೋಗಿಸುತ್ತಾರೆ ಎಂದು ತನಗೆ ತಿಳಿದ ಜ್ಞಾನವನ್ನು ವಿವರಿಸಿದ. ಮಂತ್ರಿಗಳು ಹಾಲೂ ಅದೇ ಕೆಲಸವನ್ನೇರೀ ಮಾಡೋದು ಅದು ತಂಪಾಗಿಸುತ್ತೆ ಗೊತ್ತಾ? ಅಂದರಂತೆ ! ಕೂಲೆಂಟು ಸುರಿಯುವುದನ್ನು ನೋಡಿದಾಗಲೆಲ್ಲಾ ನನಗೆ ಆಹಾ ಎಂಥಹ ಮಿಲ್ಕ್ ಪ್ರೊಡ್ಯೂಸಿಂಗ್ ಮೆಷೀನು. ಇಂಥಹ ಒಂದು ಮೆಷೀನು ಸಿಗುವ ಹಾಗಿದ್ದಿದ್ದರೆ ಪ್ರಪಂಚದ ಮಕ್ಕಳಿಗೆಲ್ಲರಿಗೂ ಹಾಲು ಹಂಚಬಹುದಿತ್ತು! ಅಂತ ಅನಿಸುತ್ತಿತ್ತು.

✵

# ಗಂಡಸರನ್ನು ಕರೆಯಿರಿ

**• ಡಾ|| ಪಿ.ಎಸ್. ರಾಮಾನುಜಂ**

**ಮೊ**ನ್ನೆ ಯಾರಿಂದಲೋ ಒಂದು ದೂರವಾಣಿ ಕರೆ ಬಂದಿತು. ನಾನು ರಿಸೀವರನ್ನು ಎತ್ತಿಹಿಡಿದು ''ಹಲೋ ಯಾರು ಮಾತಾನಾಡೋದು, ಯಾರು ಬೇಕು?'' ಎಂದು ಕೇಳಿದೆ. ಅದಕ್ಕೆ ''ನಿಂ ಮನೇಲಿ ಗಂಡಸರು ಯಾರಾದ್ರೂ ಇದ್ರೆ ಕರೀರಿ'' ಎಂದು ಆ ಕಡೆಯಿಂದ ಆದೇಶ ಬಂದಿತು. ನಾನು ಇವರಿಗೆ ಗಂಡಿನಂತೆ ಕಾಣಿಸಲಿಲ್ಲವೇನು? ಅಥವಾ ದೂರವಾಣಿಯಾದುದರಿಂದ, ನಾನು ಗಂಡಸಿನಂತೆ ಕೇಳಿಸಲಿಲ್ಲವೇನು? ನನ್ನ ಧ್ವನಿಯೇನೋ ಒಮ್ಮೊಮ್ಮೆ, ಅದೂ ದೂರವಾಣಿಯಲ್ಲಿ ಸೌಜನ್ಯದಿಂದ ಮಾತನಾಡುವಾಗ ಸ್ತ್ರೀ ಧ್ವನಿಯಂತೆ ಆಗಿಬಿಡುತ್ತದೆ ಎಂದು ಕಾಣುತ್ತದೆ. ಪೋಲಿಸ್ ಇಲಾಖೆಯಲ್ಲಿ ಸಾರ್ವಜನಿಕರೊಂದಿಗೆ ಮಧುರವಾದ ಸಂಬಂಧವನ್ನು ಇರಿಸಿಕೊಳ್ಳಬೇಕೆಂದು ಪದೇ ಪದೇ ವರಿಷ್ಟರು ಉಪದೇಶಿಸಿರುವುದರಿಂದ ನಾನು ಅದನ್ನು ಗಂಭೀರವಾಗಿ ಪರಿಗಣಿಸಿ ನನ್ನ ಧ್ವನಿಯನ್ನು ಆದಷ್ಟು ಮಧುರವಾಗಿ ಮಾಡಿಕೊಂಡು ಮಾಯಾಮಾಳವ ರಾಗದಲ್ಲಿ ಮಾತನಾಡುತ್ತೇನೆ. ಯಾರಿಗಾದರೂ ಜೋರು ಮಾಡಬೇಕಾದರೂ ರಾಗವನ್ನು ಬಿಡದೆ ಕುತೂಹಲದಲ್ಲೇ ಮಾತನಾಡುತ್ತೇನೆ. ಹೀಗೆ ಸರಾಗವಾಗಿ ಮಾತನಾಡುವುದೇ ತಪ್ಪಾಯಿತೆಂದು ತೋರುತ್ತದೆ.

ಅಂತೂ ನಾನು ನನ್ನ ಧ್ವನಿಯನ್ನು ಮಧುರವಾಗಿ ಮಾಡಿಕೊಳ್ಳುವುದರಿಂದ ಅದರಲ್ಲಿರುವ ಗಡಸುತನ ಹೋಗಿ ತತ್ಪರಿಣಾಮವಾಗಿ ಗಂಡಸುತನವೂ ಕ್ಷೀಣವಾಗಿ ನನ್ನ ಧ್ವನಿ ಶೀರವಾಣಿಯೋ ಕೋಕಿಲವಾಣಿಯೋ ಆಗಿ, ಕೇಳಿದವರು ಪರಸ್ತ್ರೀಯೊಡನೆ ನಮಗೇನು ಮಾತು ಎಂದುಕೊಂಡು 'ಗಂಡಸರನ್ನು ಕರೆಯಿರಿ' ಎನ್ನುತ್ತಾರೆ. ಇದನ್ನು ಕೇಳಿ ನನಗೆ ಹೇಗೆ ಆಗಬೇಡ? ಇದು ನನ್ನ ಪೌರುಷಕ್ಕೆ ಆದ ಅವಮಾನ, ನನ್ನ ಹುರಿಮೀಸೆಗಾದ ತೇಜೋಭಂಗ, ನನ್ನನ್ನು ಗಂಡಸೆಂದು ತಿಳಿದುಕೊಂಡಿರುವ ಎಲ್ಲರಿಗೂ ಆಗಿರುವ ಮುಖಭಂಗ.

ಆದರೆ ನಾನು ಇದರ ಬಗ್ಗೆ ಬಹಳ ಯೋಚಿಸಿ ಈಗ ಒಂದು ಉಪಾಯ ಮಾಡಿಕೊಂಡಿದ್ದೇನೆ. ಅಂತಹ ಕರೆ ಬಂದಾಗ ನಾನು ''ಆಗಲಿ ಕರೆಯುತ್ತೇನೆ'' ಎಂದು ಮೃದು ಮಧುರವಾದ ಧ್ವನಿಯಲ್ಲಿ ಹೇಳಿ ಸ್ವಲ್ಪ ಹೊತ್ತು ರಿಸೀವರನ್ನು ಕೆಳಗಿಟ್ಟು, ಪುನಃ ರಿಸೀವರನ್ನು ತೆಗೆದುಕೊಂಡು ಗಡುಸಾದ ಧ್ವನಿಯಲ್ಲಿ 'ಯಾರು ಮಾತಾಡೋದು?' ಎಂದು ಕೇಳುತ್ತೇನೆ. ಆಗ ಅವರೂ ನನ್ನ ಪುರುಷ ಧ್ವನಿಯನ್ನು ಕೇಳಿ ನಾನು ಗಂಡಸೆಂದು ನಂಬಿಕೊಂಡು ಮಾತಾಡಲು ಪ್ರಾರಂಭಿಸುತ್ತಾರೆ.

ಅವರು 'ಗಂಡಸರು' ಎಂದು ಕರೆಯುವುದು ಜವಾಬ್ದಾರಿಯಿರುವ ಯಾರಾದರೂ ದೊಡ್ಡವರು ಎಂಬ ಅರ್ಥದಲ್ಲಿ ಮಾತ್ರ ಎಂದು ತೋರುತ್ತದೆ. ಅಂದರೆ ಮನೆ ವ್ಯವಹಾರವನ್ನು ನಡೆಸುತ್ತಿರುವವರು ಎಂದರ್ಥ. ಅವರಿಗೆ ಗೊತ್ತಿರಲಿಕ್ಕಿಲ್ಲ, ಎಷ್ಟೋ ಕಡೆ ಸ್ತ್ರೀ ಧ್ವನಿಯೇ

ಮನೆಯ ಒಡೆತನದ ಧ್ವನಿಯೆಂದು. ಹೋಗಲಿ ಬಿಡಿ, ನಾನು ಈ ಸೂಕ್ಷ್ಮಾತಿಸೂಕ್ಷ್ಮ ವಿಷಯಕ್ಕೆ ಕೈ ಹಾಕಲು ಇಷ್ಟಪಡುವುದಿಲ್ಲ.

'ಗಂಡಸರನ್ನು ಕರೀರಿ' ಎಂದಾಗ ನನಗೆ ಹಳೆಯ ಕಥೆಯೊಂದು ನೆನಪಿಗೆ ಬರುತ್ತದೆ. ಯಾರೋ ಒಬ್ಬರ ಮನೆಯಲ್ಲಿ ಒಮ್ಮೆ ಒಂದು ರಾತ್ರಿ ಹಾವೊಂದು ಹೊಕ್ಕಿತಂತೆ. ಅದನ್ನು ನೋಡಿ ಮನೆಯ ಯಜಮಾನ ಗಾಬರಿಯಿಂದ ಹೆಂಡತಿಯನ್ನು ನೋಡಿ 'ಯಾರಾದ್ರೂ ಗಂಡಸರನ್ನು ಕರಿಯೇ' ಎಂದು ಕೂಗಿಕೊಂಡನಂತೆ. ಆಕೆ 'ನೀವು ಗಂಡಸಲ್ಲವೇನ್ರೀ?' ಎಂದು ಮೂದಲಿಸಿದಾಗ 'ಓ, ಹೌದಲ್ವೇ ಸರಿಯಾದ ಸಮಯದಲ್ಲಿ ಜ್ಞಾಪಿಸಿದೆ' ಎಂದು ಹೇಳಿ ಆತ ಹೆಂಡತಿಯ ಮಾತಿನಲ್ಲಿ ಭರವಸೆಯಿಟ್ಟು ದೊಣ್ಣೆ ತೆಗೆದುಕೊಂಡು ಹಾವನ್ನು ಓಡಿಸಲು ಸಿದ್ಧನಾದನಂತೆ.

ಈ ಕಥೆಯಲ್ಲಿ ಪರಿಸ್ಥಿತಿ ಸ್ವಲ್ಪ ಭಿನ್ನ. ಇಲ್ಲಿ ಗಂಡಸಾದ ಯಜಮಾನನೇ 'ಗಂಡಸರನ್ನ ಕರಿ' ಎನ್ನುತ್ತಾನೆ. ತಾನೇ ತನ್ನ ಗಂಡಸುತನವನ್ನು ಮರೆತುಬಿಡುವ ಪರಿಸ್ಥಿತಿ ಇದು. ಈ ಪರಿಸ್ಥಿತಿ ನಮಗೇನೂ ಹೊಸದಲ್ಲ. ಚರಿತ್ರೆಯಲ್ಲಿ ಇದನ್ನು ಕಂಡಿದ್ದೇವೆ. ವರ್ತಮಾನದಲ್ಲೂ ನೋಡುತ್ತಲೇ ಇದ್ದೇವೆ. ಇದೊಂದು ರೀತಿಯ ಆತ್ಮತಿರಸ್ಕಾರ. ನಮ್ಮನ್ನು ನಾವೇ ಇಲ್ಲವೆಂದುಕೊಳ್ಳುವುದು; ಅಥವಾ ಇದೊಂದು ಆತ್ಮವಿಸ್ಮೃತಿ. ನಮ್ಮತನವನ್ನು ನಾವು ಮರೆಯುವುದು.

ಇಂತಹ ಸನ್ನಿವೇಶದಲ್ಲಿ ಒಂದು ರೀತಿಯ ಆತ್ಮನಿಂದನೆ, ಆತ್ಮವಿಸ್ಮೃತಿ – ಮುಂತಾದ ಭಾವಗಳು ಇರುತ್ತವೆ. ಇದೊಂದು ರೀತಿಯ ಪ್ರಾಮಾಣಿಕತೆ ಕೂಡ ಅನ್ನಿ. ಆದರೆ ಬೇರೆಯವರು ನಮಗೆ ಗಂಡಸರನ್ನು ಕರೆಯಿರಿ ಅಂದಾಗ ಆಗುವ ಅನುಭವವೇ ಬೇರೆ. ಎಂತಹ ಆತ್ಮಾಭಿಮಾನಶೂನ್ಯರ ಮನಸ್ಸೂ ಚುರುಕೆನ್ನುವುದು ಸಹಜ. ನಮ್ಮಂತಹವರಿಗೂ ಆಗುತ್ತಿದೆಯೆಂದರೆ ನೀವೇ ನೋಡಿಕೊಳ್ಳಿ.

ಈ ಸಂದರ್ಭದಲ್ಲಿ ನನಗೊಂದು ವಿಷಯ ನೆನಪಿಗೆ ಬರುತ್ತದೆ. ನನ್ನ ಮಗುವಿಗೊಮ್ಮೆ ತೀವ್ರವಾದ ಜ್ವರ ಬಂದಿತ್ತು. ನಾನು ಕಂಗಾಲಾಗಿ ನನಗೆ ತಿಳಿದ ವೈದ್ಯರೊಬ್ಬರ ನರ್ಸಿಂಗ್ ಹೋಂಗೆ ಫೋನ್ ಮಾಡಿದೆ. ವೈದ್ಯರು ಸಿಕ್ಕಿದರು. ನಾನು ವಿಷಯವನ್ನು ಹೇಳಿದಾಗ ''ಮಗುವನ್ನು ಕೂಡಲೇ ಇಲ್ಲಿಗೆ ಕರೆದುಕೊಂಡು ಬನ್ನಿ ಎಂದರು'' ನಾನು ಸರಿಯೆಂದು ಹೇಳಿ ನಂತರ ''ಯಾವುದಕ್ಕೂ ಮಕ್ಕಳ ತಜ್ಞರೊಬ್ಬರನ್ನು ಕರೆಸುತ್ತೀರಾ?'' ಎಂದು ಕೇಳಿದೆ. ಅದಕ್ಕೆ ಅವರು ಸ್ವಲ್ಪ ಸುಮ್ಮನಿದ್ದು, ''ಆಗಲಿ, ಆದರೆ ನಾನೂ ಮಕ್ಕಳ ತಜ್ಞನೇ. ಆದರೂ ನಿಮಗೆ ಬೇರೆಯವರು ಬೇಕು ಎಂದರೆ ಕರೆಸುತ್ತೇನೆ'' ಎಂದು ಶಾಂತವಾಗಿ ಹೇಳಿದರು.

ನನಗೆ ಅವರೂ ಮಕ್ಕಳ ಡಾಕ್ಟರೇ ಎಂಬುದು ಗೊತ್ತಿರಲಿಲ್ಲ. ನಾನು ಹೇಳಿದ ಮಾತು ಎಷ್ಟು ಅಸಂಗತವಾಯಿತು ಎಂದುಕೊಂಡು ಪೆಚ್ಚಾಗಿ ''ನನಗೆ ಗೊತ್ತಿರಲಿಲ್ಲ. ಏನೋ ಆತಂಕದಲ್ಲಿ ಹೇಳಿಬಿಟ್ಟೆ. ನೀವಿದ್ದರೆ ಸಾಕು'' ಎಂದು ಬಡಬಡಿಸಿ ರಿಸೀವರನ್ನು ಇಟ್ಟು ಡಾಕ್ಟರಲ್ಲಿಗೆ ಹೊರಟೆ.

ಆ ಡಾಕ್ಟರರಿಗೆ ಪಾಪ, ಹೇಗನ್ನಿಸಿರಬೇಕು? ಗಂಡಸರನ್ನು ಕರೆಯಿರಿ ಎಂದು

ಗಂಡಸೊಬ್ಬರಿಗೆ ಹೇಳಿದಂತೆಯೇ ಅಲ್ಲವೇ ಇದೂ? ಅವರ ಆತ್ಮಾಭಿಮಾನಕ್ಕೆ ಇದೊಂದು ದೊಡ್ಡ ಪೆಟ್ಟು. ಆದರೂ ನನಗೆ ವಿಷಯ ಗೊತ್ತಿರಲಿಲ್ಲ ಎಂದು ನಾನು ಹೇಳಿದುದು ಅವರ ಮನಸ್ಸಿನ ವ್ಯಗ್ರತೆಯನ್ನು ಕಡಿಮೆ ಮಾಡಿರಬಹುದಾದರೂ, ಅದೂ ಒಂದು ರೀತಿಯ ಅವಮಾನವೇ. ಆ ಡಾಕ್ಟರ ಸ್ನೇಹಿತನಾದ ನನಗೂ ಅವರು ಮಕ್ಕಳ ತಜ್ಞರು ಎಂಬುದು ತಿಳಿಯಲಿಲ್ಲವೆಂದ ಮೇಲೆ ಉಳಿದವರ ಪಾಡೇನು? ಊರಿಗೆಲ್ಲ ತಿಳಿದ ಪ್ರಸಿದ್ಧ ಚಲನಚಿತ್ರ ನಟರೊಬ್ಬರನ್ನು ನೋಡಿ "ನೀವು ಯಾರು?" ಎಂದು ಕೇಳಿದ ಹಾಗೆ. ಸುಪ್ರಸಿದ್ಧರು ಎಂದು ತಿಳಿದುಕೊಂಡಿರುವವರಿಗೆ ಇದೊಂದು ದೊಡ್ಡ ಆಘಾತ. ವಾಸ್ತವವಾಗಿ ನೋಡಿದರೆ ನನ್ನ ಸ್ನೇಹಿತರ ಬಗ್ಗೆ ನನಗೆ ಸಂಪೂರ್ಣ ಮಾಹಿತಿಯಿಲ್ಲದುದು ನನ್ನ ಅಜ್ಞಾನ. ಇದರಿಂದ ಅವಮಾನವಾಗಬೇಕಾದದ್ದು ನನಗೇ ಎಂಬುದು ಸರಿಯಾದರೂ, ಅನಾವಶ್ಯಕವಾಗಿ ಆ ಡಾಕ್ಟರರಿಗೂ ತೇಜೋಭಂಗವಾಗುವ ಹಾಗೆ ಮಾಡಿದೆನಲ್ಲ.

ಬಹಳ 'ಅಹಂ' ಇರುವಂತಹವರ ದರ್ಪ ಇಳಿಸಬೇಕಾದರೆ ಅಥವಾ ಕನಿಷ್ಠ ಪಕ್ಷ ಅಂತಹವರನ್ನು ರೇಗಿಸಬೇಕಾದರೆ ನಾವು ಮೇಲಿನಂತಹ ಒಂದು ಪ್ರಶ್ನೆ ಹಾಕಬೇಕು. ಈ ಪ್ರಶ್ನೆ ಹಾಕಿದ ಕೂಡಲೇ ಅವರು ಕ್ರೋಧ ಮೂರ್ಛಿತರಾಗಿ, ಕ್ರೋಧ ತಾಮ್ರಾಯತೇಕ್ಷಣರಾಗಿ ಆಗಬಹುದು. ಅಥವಾ ಪಟ್ಟೆಂದು ಒಡೆಯುವ ಅಹಂನಿಂದ ಪಂಕ್ಚರಾದ ಟೈರಿನಂತೆ ಆಗಬಹುದು.

ನಮ್ಮಲ್ಲಿ ಕೆಲವರು ಐ ಸ್ಪೆಷಲಿಸ್ಟುಗಳಿರುತ್ತಾರೆ. ಅವರು ನೇತ್ರ ವೈದ್ಯರಲ್ಲ, ನಾನು ಎಂದು ಹೇಳಿಕೊಳ್ಳುವ ಐ ಸ್ಪೆಷಲಿಸ್ಟುಗಳು. ನಾನೇ ಮಾಡಿದ್ದು, ನಾನೇ ಹೇಳಿದ್ದು ಎಂದುಕೊಂಡು ತಿರುಗುವ ಇವರಿಗೆ ನೀವು ಯಾರು? ಎಂದು ಶಂಕರಾಚಾರ್ಯರನ್ನು ಕೇಳಿದಾಗ ಅದನ್ನು ತಿಳಿದುಕೊಳ್ಳಲೆಂದೇ ಬಂದಿದ್ದೇನೆ ಎಂದು ಆಚಾರ್ಯರಂತಹವರು ಮಾತ್ರ ಹೇಳಬಹುದು. 'ನಾನು' ಹೋದರೆ ಹೋಗಬಹುದು ಎಂದು ಹೇಳಿದಂತೆ, ಈ ನಾನಿಂದ ತುಂಬಿಕೊಂಡಿರುವವರಿಂದ ನಾನನ್ನು ಹೊರದೆಗೆಯಬೇಕಾದರೆ 'ನೀವು ಯಾರು?' ಎಂದು ಕೇಳುವುದೇ ಸರಿಯಾದ ಮಾರ್ಗ. ಜ್ಞಾನಿಗಳಿಗೆ ಈ ಪ್ರಶ್ನೆಗೆ ಉತ್ತರ ತಿಳಿದಿರುತ್ತದೆ, ಅಹಂಕಾರಿಗಳಿಗಲ್ಲ.

ಈ ಅಹಂಕಾರದ ವಿಷಯ ಏನೇ ಆದರೂ, ನಾನು ಎಂಬ ಅಹಂಗೆ ನಮ್ಮ ತಾದಾತ್ಮವನ್ನು ತೋರಿಸುವ ಪಾತ್ರವಂತೂ ಇದೆ. ನಾನು ವೈದ್ಯ, ನಾನು ಶಿಕ್ಷಕ, ನಾನು ಗಂಡಸು – ಎಂಬ ಹೇಳಿಕೆಗಳಲ್ಲಿ ಈ ತಾದಾತ್ಮ್ಯ ಅಭಿವ್ಯಕ್ತವಾಗಲು ನಾನು ಇರಲೇಬೇಕು. ಈ ವೈಶಿಷ್ಟ್ಯವನ್ನು ತಿಳಿದೋ, ತಿಳಿಯದೆಯೋ, ಅಂದರೆ ನಮಗೆ ಒಂದು ತಾದಾತ್ಮ್ಯ ಅಥವಾ ಗುರುತು ಇದೆ ಎಂಬುದನ್ನು ಪರಿಗಣಿಸದೆಯೇ, ನಮ್ಮ ಐಡೆಂಟಿಟಿಯನ್ನು ಧಿಕ್ಕರಿಸಿ ಅಥವಾ ಅದರ ಬಗ್ಗೆ ಅಜ್ಞಾನದಿಂದ ಪ್ರಶ್ನಿಸಿದಾಗ ನಮಗಾಗುವ ಅನುಭವವೆಂದರೆ ಅವಮಾನ, ಕೋಪ ಇತ್ಯಾದಿಗಳು. ಅಂತೂ ಆಸೆಯನ್ನು ಅಡಗಿರುವ ಅಂಕುಶದಂತೆ ಅಹಂಕಾರಕ್ಕೆ ನೀನು ಯಾರೆಂಬ ಪ್ರಶ್ನೆ.

ನಾನು ಏನೇನು ಸಿದ್ಧಾಂತಗಳನ್ನು ಹೇಳಿಕೊಂಡರೂ ಗಂಡಸರನ್ನು ಕರೀರಿ ಎಂದು

ಫೋನಿನಲ್ಲಿ ಯಾರಾದರೂ ಹೇಳಿದಾಗ ಅಸಾಧ್ಯ ಕೋಪ ಬರುತ್ತದೆ. ಗಂಡಸು – ಹೆಂಗಸು, ಎಂಬುದೆಲ್ಲ ಅಶಾಶ್ವತವಾದುದು, ಆತ್ಮವೇ ಸತ್ಯ, ಅದಕ್ಕೆ ಲಿಂಗವಿಲ್ಲ, ಇತರ ವಿಷಯಗಳೆಲ್ಲ ಔಪಾಧಿಕ ಎಂದು ಎಷ್ಟು ಸಲ ಹೇಳಿಕೊಂಡರೂ ಎಷ್ಟು ಸಲ ಬ್ರಹ್ಮಸೂತ್ರ ಭಾಷ್ಯವನ್ನು ಓದಿಕೊಂಡರೂ, ಕೋಪ, ಅವಮಾನಗಳು ಹೋಗುವುದಿಲ್ಲ, ಮನಸ್ಸಿನಲ್ಲೇ ಇರುವ ನಾನು ಗಂಡಸು ಎಂಬ ಅಹಂ ಎಲ್ಲಿ ಹೋಗುತ್ತದೆ?

ಆದರೆ ನಮ್ಮಂತಹವರು ಎಷ್ಟು ಕೋಪ ಬಂದರೂ ಸುಮ್ಮನಿದ್ದು ಬಿಡುತ್ತೇವೆ. ಸೌಜನ್ಯದ ಮುಸುಕಿನಲ್ಲಿ ಹೇಗೋ ಕಾಲ ತಳ್ಳಿಕೊಂಡು ಹೋಗಿಬಿಡುತ್ತೇವೆ. ಆದರೆ ಗಂಡಸರನ್ನು ಕರೆಯಿರಿ ಎಂದು ಐದುಸಾವಿರ ವರ್ಷಗಳ ಹಿಂದೆ ಮಹಾಭಾರತದ ಭೀಮಸೇನನಿಗೋ, ದುರ್ಯೋಧನನಿಗೋ, ಜರಾಸಂಧನಿಗೋ ಕೇಳಿದ್ದರೆ ಏನಾಗುತ್ತಿತ್ತು? ಅದನ್ನು ಯೋಚಿಸಲೂ ಕೂಡ ಭಯವಾಗುತ್ತದೆ. ಅವರನ್ನು ಕೇಳಿದ್ದರೆ ಅವರು ಫೋನನ್ನು ಕೈಯಲ್ಲೇ ಅಮುಕಿ ಪುಡಿಪುಡಿ ಮಾಡಿ, ಭಯಂಕರವಾಗಿ ಗರ್ಜಿಸಿ ವೀರಪ್ರತಿಜ್ಞೆಗಳನ್ನು ಮಾಡಿ ಹತ್ತಿರವಿರುವ ಕಂಭಗಳನ್ನು ಕಿತ್ತುಹಾಕಿ ಬಿಡುತ್ತಿದ್ದರೆಂದು ಕಾಣಿಸುತ್ತದೆ. ಆಗ ಉಲ್ಕಾಪಾತವಾಗಿ, ನರಿಗಳ ಕೂಗು ಕೇಳಿಸಿ ಅಪಶಕುನಗಳಾಗಿ ಲೋಕವೇ ನಡುಗಿಬಿಡುತ್ತಿತ್ತು. ಆದರೆ ನಮಗೆ ಕಂಭವನ್ನು ಕೀಳುವಷ್ಟು ಶಕ್ತಿಯಿಲ್ಲವಾದ್ದರಿಂದ, ಅಷ್ಟೇ ಏಕೆ, ಪಾರ್ಥೇನಿಯಂ ಗಿಡವನ್ನು ಕೀಳುವುದು ಕೂಡ ಇಂದಿನ ಭಾರತೀಯರಿಗೆ ಕಷ್ಟವಾದ್ದರಿಂದ, ನಾವು ಸಾರ್ವಜನಿಕ ಸಂಬಂಧವನ್ನು ಮಧುರವಾಗಿರಿಸಿಕೊಳ್ಳುವ ನೆಪದಿಂದ ಸುಮ್ಮನಾಗುತ್ತೇವೆ. 'ಸರಿ ಕರೆಯುತ್ತೇವೆ' ಎನ್ನುತ್ತೇವೆ.

ಆದರೂ ಇಂತಹ ಸನ್ನಿವೇಶಗಳನ್ನು ನಿಭಾಯಿಸುವುದು ಹೇಗೆ, ಮಾನ ಉಳಿಸಿಕೊಳ್ಳುವುದು ಹೇಗೆ ಎಂದು ನಾನು ಯೋಚಿಸುತ್ತಲೇ ಇದ್ದಾಗ ಮೊನ್ನೆ ಒಂದು ಹೊಸ ಉಪಾಯ ಹೊಳೆಯಿತು. ಅದನ್ನು ಪ್ರಯೋಗಿಸಿಯೂ ಬಿಟ್ಟೆ. ಮೊನ್ನೆ ಗಂಡಸು ಧ್ವನಿಯೊಂದು 'ಗಂಡಸರನ್ನು ಕರೀರಿ' ಎಂದಾಗ 'ನೀವು ಯಾರಮ್ಮ?' ಎಂದೆ. ಆತನಿಗೆ ಆಘಾತ, ಎಲಾ ಇವನ, ಗಂಡಸಾದ ನನ್ನನ್ನೇ 'ಯಾರಮ್ಮ?' ಎನ್ನುತ್ತಾನಲ್ಲ – ಎಂದು ಕೋಪದಿಂದ 'ನಾನು ಅಮ್ಮ ಅಲ್ರೀ' 'ಅಪ್ಪ' ಎಂದ ಆತ. 'ಓ ನನಗೆ ಗೊತ್ತಿರಲಿಲ್ಲ, ಈಗ ಗೊತ್ತಾಯ್ತು ಬಿಡಿ' ಎಂದು ಗಾಯಕ್ಕೆ ಉಪ್ಪು ಸವರಿದೆ. ನನ್ನ ಸೇಡಂತೂ ತೀರಿತು.

ಆದರೆ ಇದೆಲ್ಲ ಯಾರಿಗಾದರೂ ಒಮ್ಮೊಮ್ಮೆ ಸಂಭವಿಸುವ ಘಟನೆ ಅಷ್ಟೇ. ದೂರವಾಣಿಯಲ್ಲಿ ಧ್ವನಿ ಗೊತ್ತಾಗದೆ ಹೋದಾಗ ಈ ರೀತಿಯ ಪ್ರಮಾದ ಸಂಭವಿಸಬಹುದು. ಆದ್ದರಿಂದ ಇದನ್ನೆಲ್ಲ ಅಷ್ಟಾಗಿ ಮನಸ್ಸಿಗೆ ನೀವು ಹಚ್ಚಿಕೊಳ್ಳಬೇಡಿ. ನಿಮಗೆ ಸ್ತ್ರೀ ಧ್ವನಿಯಿದ್ದರೆ ಜನರು ಮರ್ಯಾದೆಯಿಂದಲೇ ಮಾತನಾಡಿಸುತ್ತಾರೆ. ಆದ್ದರಿಂದ ಒಳ್ಳೆಯದೇ ಯಾವುದಕ್ಕೂ ಕೋಪಿಸಿಕೊಳ್ಳುವುದರಿಂದ ಪ್ರಯೋಜನವಿಲ್ಲ, ಎಲ್ಲವನ್ನೂ ಸಹಿಸಿಕೊಳ್ಳಬೇಕು. ಸಹನೆಯೆಂಬುದು ನಮ್ಮ ಪರಂಪರೆಯಲ್ಲೇ ಬಂದಿಲ್ಲವೇ? ಸಹಿಸಿಕೊಳ್ಳೋಣ, ದೂರವಾಣಿಯಲ್ಲಿ ತಾನೆ ಹಾಗಾಗುವುದು? ಎದುರಿಗೆ ನೋಡಿದಾಗ ಹೀಗಾಗುವುದಿಲ್ಲವಲ್ಲ.

***ಕರ್ನಾಟಕ ಸಾಹಿತ್ಯ ಅಕಾಡೆಮಿ ಅವರ ಪ್ರಬಂಧ 1994ರ ಸಂಕಲನದಿಂದ ಆಯ್ದುಕೊಳ್ಳಲಾಗಿದೆ***

# ಸಮವಸ್ತ್ರ ಸಂಹಿತೆ

● ಇಸ್ಮಾಯಿಲ್

**ಮಾ**ನವ ಮೊದಲ ಬಾರಿಗೆ ವಸ್ತ್ರ ತೊಟ್ಟಿದ್ದು 1.70 ಲಕ್ಷ ವರ್ಷಗಳ ಹಿಂದೆ ಎಂದು ಹೊಸ ಸಂಶೋಧನಾ ಅಧ್ಯಯನ ಮೊನ್ನೆ ಮೊನ್ನೆ ಬಹಿರಂಗಪಡಿಸಿದೆ. ಆದರೆ ಮಾನವ ಮೊಟ್ಟಮೊದಲಿಗೆ ಸಮವಸ್ತ್ರ ಯಾವಾಗ ಮತ್ತು ಎಲ್ಲಿ ಧರಿಸಿದನೆಂಬುದು ಖಚಿತವಾಗಿ ತಿಳಿದಿಲ್ಲ. ಸಮವಸ್ತ್ರವೆಂದಾಗ ನಮಗೆ ಮೊದಲು ನೆನಪಾಗುವುದು ಆಸ್ಪತ್ರೆಯ ನರ್ಸುಗಳು, ಆಯಾಗಳು, ಡಾಕ್ಟರು, ಕೋರ್ಟಿನಲ್ಲಿ ಲಾಯರ್‌ಗಳು, ಜಡ್ಜ್‌ಗಳು. ಅಂದರೆ ಸಮವಸ್ತ್ರಗಳು ಕೆಲವು ವೃತ್ತಿ ಸಂಬಂಧಗಳು ಎನಿಸುತ್ತದೆ. ಹಾಗೆ ಸ್ವಯಂಸೇವಕರ ಸಂಘಗಳಾದ ಸೇವಾದಳ, ಆರ್.ಎಸ್.ಎಸ್. ಸಮವಸ್ತ್ರಗಳನ್ನು ಕಂಡಿದ್ದೇವೆ. ಇನ್ನು ಮಿಲಿಟರಿ ಹಾಗು ಪೋಲಿಸ್, ಸೆಕ್ಯೂರಿಟಿ.. ಹೀಗೆ ಸಮವಸ್ತ್ರವನ್ನು ಮೆರೆಸುವ ಅನೇಕರಿದ್ದಾರೆ. ಸಮವಸ್ತ್ರ ಧರಿಸುವ ಖುಷಿ ಅಥವಾ ಕಷ್ಟ, ಅದರಿಂದಾಗಿ ಬರುವ ಲಾಭ ಅಥವಾ ಆಗುವ ನಷ್ಟ ಹಾಗು ಸಮವಸ್ತ್ರ ಜಾರಿಗೆ ತರುವ ಹಿಂದಿನ ಉದ್ದೇಶ ಮತ್ತು ಅನಿವಾರ್ಯತೆ ಬಗ್ಗೆ ನನಗೆ ತೀವ್ರ ಕುತೂಹಲ. ಆದ್ದರಿಂದ ಸಮವಸ್ತ್ರದ ಸೆರಗನ್ನು ಹಿಡಿದಿದ್ದೇನೆ. ಅದು ನನ್ನನ್ನು ಎಲ್ಲಿ ಎಳೆದುಕೊಂಡು ಹೋಗಿ ನಿಲ್ಲಿಸುವುದೋ ಹೇಳಲಾರೆ.

ಯಾವ ಪದ್ಧತಿಯೂ ಸಮರ್ಪಕವಾಗಿ ಜಾರಿಗೆ ಬರಲು ಅದಕ್ಕೆ ನೀತಿ ನಿಯಮದ ಸಹಾಯ ಬೇಕಾಗುತ್ತೆ. ಹೊಸ ಪದ್ಧತಿಯೆಂದ ಮೇಲೆ ಅದನ್ನು ಉಲ್ಲಂಘಿಸಲು ಅನೇಕರು ಹವಣಿಸುತ್ತಲೇ ಇರುತ್ತಾರೆ. ಅಂತಹವರಿಗೆ ಶಿಕ್ಷೆ ವಿಧಿಸಲೇಬೇಕಾಗುತ್ತೆ. ಈ ಕಟ್ಟುಪಾಡು ಮಾಡಲು ಒಂದು ಸಂಹಿತೆ ಬೇಕೇಬೇಕು.

ಸಮವಸ್ತ್ರ ಅಂದರೆ ಅನೇಕರಿಗೆ ಒಂದು ಅಧಿಕಾರ. ಬಹಳ ಶ್ರದ್ಧೆಯಿಂದ ಅಭಿಮಾನದಿಂದ ಹಾಕಿಕೊಳ್ಳುತ್ತಾರೆ. ಆ ವರ್ಗದವರೆಂದರೆ ಪೋಲಿಸ್‌ನವರು, ವೈದ್ಯರು, ಲಾಯರ್‌ಗಳು, ಜಡ್ಜಗಳು, ಸೆಕ್ಯೂರಿಟಿಯವರು. ಬೇರೆಯವರೆಲ್ಲ ಅವರ ಸಮವಸ್ತ್ರಕ್ಕೆ ಬೆಲೆಕೊಟ್ಟು ಹೇಳಿದ ಮಾತನ್ನು ಕೇಳುತ್ತಾರೆ. ಮುಫ್ತಿಯಲ್ಲಿರುವ ಪೋಲಿಸ್ ಯಾರನ್ನಾದರೂ ಕರೆದರೆ ಯಾರು ಹತ್ತಿರ ಹೋಗುತ್ತಾರೆ. ಅದೇ ಸಮವಸ್ತ್ರ ಧರಿಸಿದ ಪೋಲಿಸ್ ಕರೆದನೆಂದರೆ ಹೆದರಿಕೊಂಡು ತಕ್ಷಣ ಅವನ ಬಳಿ ಹೋಗಿ ಕೈಕಟ್ಟಿ ನಿಲ್ಲುವುದಿಲ್ಲವೆ? ಅದೇ ಜೈಲಿನಲ್ಲಿ ಖೈದಿಗಳಿಗೂ ಸಮವಸ್ತ್ರ ಇರುತ್ತೆ. ಅದನ್ನು ಅನಿವಾರ್ಯವಾಗಿ ಧರಿಸಿರುತ್ತಾರೆ. ಅಲ್ಲಿ ಸಮವಸ್ತ್ರ ಒಂದು ಶಿಕ್ಷೆ, ಕೀಳರಿಮೆ ಹುಟ್ಟಿಸುವಂತದ್ದು.

ಸಮವಸ್ತ್ರದ ಮಹತ್ವ ನಮಗೆ ತಿಳಿಸುವಾಗ ಸಾಧಾರಣವಾಗಿ ನಮಗೆ ಜಪಾನ್ ದೇಶದ ಪ್ರಗತಿ ಬಗ್ಗೆ ಭಾಷಣ ಬಿಗಿಯುತ್ತಾರೆ. ಅಲ್ಲಿ ಅತ್ಯಂತ ಹಿರಿಯ ಅಧಿಕಾರಿಯೂ ಕನಿಷ್ಟ ಕಾರ್ಮಿಕನಂತೆ ಅದೇ ರೀತಿ ಸಮವಸ್ತ್ರ ಧರಿಸುತ್ತಾನೆ. ವೃತ್ತಿಯಲ್ಲಿ ಯಾವ ಭೇದಭಾವ (ಸಂಬಳ, ಭತ್ಯೆ, ಭಡ್ತಿ ಹೊರತುಪಡಿಸಿ) ವಿಲ್ಲದೆ ಒಟ್ಟಾಗಿ ಕೆಲಸ ಮಾಡುವುದೇ ಜಪಾನಿಯರ

ಏಳಿಗೆಗೆ ಮುಖ್ಯಕಾರಣ ಎಂಬ ಉದಾಹರಣೆ ಕೊಡುತ್ತಾರೆ. ಅಧಿಕಾರಿಗಳಿಗೆ ಭವ್ಯವಾದ ವಿಸ್ತಾರವಾದ ಪ್ರತ್ಯೇಕ ಕೋಣೆಗಳಿಲ್ಲದೆ ಎಲ್ಲರಿಗೂ ಒಂದೇ ರೀತಿಯ ಕ್ಯೂಬಿಕಲ್ ಮಾಡಿಕೊಡುವುದು ಜಪಾನಿಯರ ಶೈಲಿಯೇ ಆಯಿತು. ಪೀಠಿಕೆಯ ಪಿತ್ತ ಜಾಸ್ತಿಯಾಯಿತು, ವಿಷಯಕ್ಕೆ ಬರೋಣ. ಬ್ಯಾಂಕುಗಳಲ್ಲಿ ಸಮವಸ್ತ್ರ ಎಲ್ಲರಿಗೂ ಇರುವುದಿಲ್ಲ ನಾಲ್ಕನೆಯ ದರ್ಜೆಯ ನೌಕರರಿಗೆ ಮಾತ್ರ. (ಕೆಲವು ಬ್ಯಾಂಕುಗಳಲ್ಲಿ ಆಫಿಸರ್‌ಗಳಿಗೆ ಒಂದೇ ರೀತಿಯ ಟೈ ಧರಿಸುವ ಪದ್ಧತಿಯನ್ನು ಬಿಟ್ಟು) ಸಮವಸ್ತ್ರ ಹಾಕಿಕೊಳ್ಳುವುದೆಂದರೆ ದೊಡ್ಡ ತಲೆನೋವೆಂದು ಆ ವರ್ಗ ಆದಷ್ಟು ಮಟ್ಟಿಗೆ ತಪ್ಪಿಸಿಕೊಳ್ಳಲು ಹವಣಿಸುತ್ತಾರೆ. ಸಮವಸ್ತ್ರವನ್ನು ಕೆಲವು ಕಾಲದಲ್ಲಿ ಸಂತೋಷವಾಗಿ ಧರಿಸುವುದುಂಟು. ಏಕೆಂದರೆ ಚಳಿಗಾಲಕ್ಕೆ ಒಳ್ಳೆ ಉಲ್ಲನ್ ಬಟ್ಟೆಯನ್ನು ಕೊಡುತ್ತಾರೆ. ಅದನ್ನು ಹೊಲಿಸಿಕೊಳ್ಳಲು ದರ್ಜಿಯ ಖರ್ಚನ್ನು ಕೊಡುತ್ತಾರೆ. ಜೊತೆಗೆ ಶೂಸ್ ಕೊಡುತ್ತಾರೆ. ಆದರೆ ಸಮವಸ್ತ್ರ ಸಂಹಿತೆ ಪ್ರಕಾರ ತಮ್ಮ ಸಮವಸ್ತ್ರದ ಮೇಲೆ ಬ್ಯಾಂಕಿನ ಹೆಸರು ಹಾಗು ಚಿನ್ಹೆಯನ್ನು ಹಾಕಿಸಿ ಕೊಳ್ಳುವುದಿಲ್ಲ ಅಥವಾ ಪ್ರಥಮಬಾರಿಗೆ ಕಾಣಿಸುವಂತೆ ಮಾಡಿ ಕಡೆಗೆ ಅದು ಕಿತ್ತು ಹೋಯಿತೆಂದು ಹೇಳಿಬಿಡುತ್ತಾರೆ. ಬಟ್ಟೆಕೊಟ್ಟಮೇಲೆ ತಮಗೆ ಇಷ್ಟಬಂದಂತೆ ಉಲ್ಲನ್ ಸಫಾರಿನೊ ಅಥವಾ ಕ್ಲೋಸ್‌ಕಾಲರ್ ಕೋಟನ್ನು ಕೆಲವರು ಹೊಲಿಸಿಕೊಂಡು ಬರುತ್ತಾರೆ. ಇದಕ್ಕೆಲ್ಲಾ ಉದ್ದೇಶವಿಲ್ಲದಿಲ್ಲ. ಒಮ್ಮೆ ನಮ್ಮ ಜವಾನ ಮರಿಸ್ವಾಮಿಯನ್ನು ಕೇಳಿಕೊಂಡ ಬಂದ ವ್ಯಕ್ತಿ ''ಸಾರ್ ಇಲ್ಲಿ ಸ್ಪೆಷಲ್ ಅಸಿಸ್ಟೆಂಟ್ ಮರಿಸ್ವಾಮಿ ಇದ್ದಾರೆಯೆ?'' ಎಂದು ಕೇಳಿದರು. ಅವರು ಕೇಳಿದ ಪ್ರಶ್ನೆಯ ಧಾಟಿ ನಮ್ಮ ಮರಿಸ್ವಾಮಿಯನ್ನು 'ಲೆಫ್ಟಿನೆಂಟ್' ಎಂಬ ಹುದ್ದೆಯಷ್ಟು ಎತ್ತರದಲ್ಲಿ ನಿಲ್ಲಿಸಿದ್ದಾರೆಂದು ಅನಿಸಿತು. ನಮ್ಮಲ್ಲಿ ಮರಿಸ್ವಾಮಿ ಇದ್ದಾರೆ ಆದರೆ ಅವರು ಸ್ಪೆಷಲ್ ಅಸಿಸ್ಟೆಂಟ್ ಅಲ್ಲ ಎಂದು ಹೇಳಬೇಕಾಯಿತು. (ಗುಮಾಸ್ತನಿಗಿಂತ ಹೆಚ್ಚಿನ ಜವಾಬ್ದಾರಿ ಹಾಗು ಅಧಿಕಾರಿಗಿಂತ ಕಮ್ಮಿ ಜವಾಬ್ದಾರಿ ಇರುವ ಹುದ್ದೆಗೆ ಸ್ಪೆಷಲ್ ಅಸಿಸ್ಟೆಂಟ್ ಎಂದು ಕರೆಯುತ್ತಾರೆ) ಅವನ ಮೇಲಿನ ದ್ವೇಷ ಅಸೂಯೆಯಿಂದಾಗಿ ಆ ಮಾತು ಕೇಳದೆ ಸರಿಯಾದ ಮಾಹಿತಿ ಕೊಡುವುದಷ್ಟೆ ಆಗಿತ್ತು. ನಮ್ಮ ಮರಿಸ್ವಾಮಿ ನೋಡುವುದಕ್ಕೆ ಬಹಳ ಸ್ಫುರದ್ರೂಪಿ. ಅವನನ್ನು ವಿಂಟರ್ ಯುನಿಫಾರಂನಲ್ಲಿ ನೋಡಿದರೆ ಅವನನ್ನು ಜನರಲ್ ಮ್ಯಾನೇಜರ್ ಅಂದರೂ ನಂಬುವಂತಹ ಮೈಕಟ್ಟು. ಅವನಿಗೆ ಮದುವೆಗಾಗಿ ಹೆಣ್ಣು ನೋಡುತ್ತಿದ್ದಾರೆಂದು ನಂತರ ವಿಷಯ ಗೊತ್ತಾಯಿತು. ಬಹುಶಃ ಈ ಕಾರಣಕ್ಕಾಗಿ ಅವನು ಬೇಸಿಗೆ ಕಾಲದಲ್ಲೂ ವಿಂಟರ್ ಯೂನಿಫಾರಂ ಧರಿಸುತ್ತಿದ್ದನೇನೊ? ಸಮವಸ್ತ್ರಸಂಹಿತೆಯಲ್ಲಿ ಬೇಸಿಗೆ ಕಾಲದಲ್ಲಿ ಚಳಿಗಾಲದ ಯೂನಿಫಾರಂ ಧರಿಸಿದ್ದಕ್ಕೆ ಯಾವ ಶಿಕ್ಷೆಯೂ ನಮೂದಿಸಿರಲಿಲ್ಲ. ಕಾರ್ಮಿಕ ಸಂಘಗಳು ಬಹಳ ಪವರ್‌ಫುಲ್ ಆಗಿದ್ದ ಕಾಲವದು. ಸೆಖೆ ಹಾಗು ಚಳಿ ನಿರ್ಧರಿಸುವ ಸ್ವಾತಂತ್ರ ಕಾರ್ಮಿಕರಿಗೆ ಸೇರಿದ್ದು ಎಂದು ಹೋರಾಟಕ್ಕಿಳಿಯುವ ಸಾಧ್ಯತೆಯಿದ್ದರಿಂದ ಮುನಿಸ್ವಾಮಿಯನ್ನು ಯಾರೂ ಏನು ಕೇಳುತ್ತಿರಲಿಲ್ಲ.

ಚಳಿಗಾಲದ ಸಮವಸ್ತ್ರದ ಬಗ್ಗೆ ರೋಚಕ ವರದಿಯೊಂದನ್ನು ಮಾಡಲೇಬೇಕು. ನಮ್ಮ ಕಂಟೋನ್ಮೆಂಟ್ ಶಾಖೆಯಲ್ಲಿ ಸುಪ್ರಸಿದ್ಧ ಗ್ರಾಹಕರು ಡಿಸೆಂಬರ್ 31ರಂದು ನ್ಯೂ ಇಂಟರ್

ಪಾರ್ಟಿಯನ್ನು ಅದ್ಧೂರಿಯಾಗಿ ಏರ್ಪಡಿಸಿ ಎಲ್ಲಾ ಸಿಬ್ಬಂದಿಯನ್ನೂ ಆಹ್ವಾನಿಸುತ್ತಿದ್ದರು. ಶಾಖೆಯಲ್ಲಿ ಜಮೆದಾರ್ ಹಾಗು ಧರ್ಫ್ತಿ (ಜವಾನರಲ್ಲಿ ಅಗ್ರಶ್ರೇಣಿಯ ಹುದ್ದೆ) ಆಗಿದ್ದ ರಸೂಲ್ ಹಾಗೂ ಅಮೀರ್‌ಖಾನ್ ಆ ಪಾರ್ಟಿಗೆ ಟ್ರಿಮ್ ಆಗಿ ವಿಂಟರ್ ಯೂನಿಫಾರಂನಲ್ಲಿ ಬಂದಾಗ ದ್ವಾರದಲ್ಲಿದ್ದ ಸ್ವಾಗತಕಾರಿಣಿಯರು ಓಡಿಬಂದು ರಸೂಲ್ ಹಾಗು ಅಮೀರ್‌ಖಾನ್‌ರನ್ನು ಭವ್ಯವಾಗಿ ಒಳಗೆ ಬರಮಾಡಿಕೊಂಡು ಅವರ ಹಿಂದೆ ಬರುತ್ತಿದ್ದ ಬ್ಯಾಂಕಿನ ಮ್ಯಾನೇಜರ್ ಹಾಗು ಅಕೌಂಟೆಂಟ್‌ರನ್ನು ಕತ್ತೆತ್ತಿಯೂ ನೋಡದೆ ಕಡೆಗಣಿಸಿದರು. ಅಧಿಕಾರಿಗಳು ತಬ್ಬಿಬ್ಬಾದರೂ. ಅಷ್ಟರಲ್ಲಿ ಹೋಸ್ಟ್ ರವೀಂದ್ರನ್ ಬಂದು ಅಧಿಕಾರಿಗಳನ್ನು ಗುರುತು ಹಿಡಿದು ಒಳಗೆ ಕರೆದಿದ್ದರಿಂದ ಮಾನ ಉಳಿಯಿತು. ಅಧಿಕಾರಿಗಳು ಸರಳ ಉಡುಪಿನಲ್ಲಿದ್ದು ಇಷ್ಟೆಲ್ಲಾ ರಾದ್ಧಾಂತವಾಯಿತು.

ಪಾರ್ಟಿ ಮುಗಿದ ಮೇಲೆ ಅಕೌಂಟೆಂಟ್ ಸುಬ್ರಮಣ್ಯಂ ರಸೂಲ್ ಹಾಗು ಅಮೀರ್‌ಖಾನ್‌ಗೆ ''ನಾಳೆ ಬಾ ಬ್ಯಾಂಕಿಗೆ ನಿನಗೆ ಮೆಮೊ ಕೊಡ್ತಿನಿ'' ಅಂದರು. ರಸೂಲ್ ನಕ್ಕ. ಅವತ್ತಿನಿಂದ ಯಾವ ಪಾರ್ಟಿಗೆ ಹೋಗಲಿ ಮ್ಯಾನೇಜರ್ ಹಾಗು ಅಕೌಂಟೆಂಟ್ ಸೂಟ್ ಹಾಕದೆ ಹೋಗುತ್ತಿರಲೇ ಇಲ್ಲ ಅನ್ನಿ!

ನಮ್ಮಲ್ಲಿ ರಂಗಸ್ವಾಮಿ ಅತಿ ಚುರುಕಿನ ಜವಾನ. ಅವನು ಎಲ್ಲರಂತಲ್ಲ. ಸಮವಸ್ತ್ರದಲ್ಲಿ ಬುಜಗಳ ಮೇಲೆ ಸಿ.ಬಿ.ಐ. ಎಂದು ಎಂಬ್ರಾಯಿಡ್ರಿ ಮಾಡಿಸಿ ಕೊಂಡಿದ್ದ. ಬೇರೆಯವರಿಗೆ ಅವನು ಮಾದರಿ ಎಂದು ನಮ್ಮ ಮ್ಯಾನೇಜರ್ ''ನೋಡಿ ರಂಗಸ್ವಾಮಿಯನ್ನು ಅವನಿಗೆ ಬ್ಯಾಂಕಿನ ಮೇಲೆ ಎಷ್ಟು ಅಭಿಮಾನ ಹಾಗು ಗೌರವ'' ಎಂದರು. ಅದಕ್ಕೆ ಬೇರೆ ಜವಾನ ''ಸಾರ್ ಅವನು ಬ್ಯಾಂಕಿನ ಹೆಸರಿನ ಸಂಕ್ಷಿಪ್ತ ರೂಪವನ್ನು ತನ್ನ ಲಾಭಕ್ಕೆ ಬಳಸಿಕೊಳ್ಳುತ್ತಿದ್ದಾನೆ. ನೀವು ತಿಳಿದುಕೊಂಡ ಹಾಗೆ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಮೇಲೆ ಅವನಿಗೆ ನೀವು ತಿಳಿದುಕೊಂಡಷ್ಟು ಅಭಿಮಾನ ಅಷ್ಟರಲ್ಲೇ ಇದೆ. ಅವನು ತಾನು ಸರ್ಕಾರದ ಸಿ.ಬಿ.ಐ.ನಲ್ಲಿದ್ದೇನೆ ಎಂದು ಜನರನ್ನು ನಂಬಿಸಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿಸಿಕೊಳ್ಳಲು ಬ್ಯಾಂಕಿನ ಸಂಕ್ಷಿಪ್ತ ರೂಪವನ್ನು ದುರಪಯೋಗಗೊಳಿಸುತ್ತಿದ್ದಾನೆ'' ಎಂದು ಹೇಳಿದಾಗ ಆಶ್ಚರ್ಯವಾಯಿತು. ನಿಜವಿರಬೇಕು. ಏಕೆಂದರೆ ನಾವು ಜೀಪಿನಲ್ಲಿ ಓಡಾಡುತ್ತಿರುವಾಗ ನಮಗೆ ಅನಿರೀಕ್ಷಿತ ಮನ್ನಣೆ ಸಿಗುತ್ತಿದ್ದುದು ಜ್ಞಾಪಕಕ್ಕೆ ಬಂತು.

ಪ್ರತಿಯೊಂದಕ್ಕೂ ಒಂದು ಕ್ಲೈಮ್ಯಾಕ್ಸ್ ಇದ್ದೇ ಇರಬೇಕು. ಈ ಸಮವಸ್ತ್ರ ಪುರಾಣಕ್ಕೂ ಒಂದಿದೆ. ಸಮವಸ್ತ್ರ ಉಪಯೋಗಿಸಲಿ ಬಿಡಲಿ ಅದನ್ನು ಕೊಡಲು ಸ್ವಲ್ಪ ತಡಮಾಡಿದರೆ ಅಥವಾ ಕ್ವಾಲಿಟಿ ಸ್ವಲ್ಪ ಕಮ್ಮಿಯಾದರೆ ನೌಕರರು ಹೋರಾಡುತ್ತಿದ್ದರು. ಕೆಲವರು ಆ ಬಟ್ಟೆಗಳನ್ನು ತಮ್ಮ ಮಕ್ಕಳಿಗೆ ಅಥವಾ ಭಾವಮೈದುನರಿಗೆ ಕೊಟ್ಟುಬಿಡುತ್ತಿದ್ದರು. ಅವೆಲ್ಲಾ ಎಲ್ಲಾ ಕಡೆಯೂ ನಡೆಯುವಂತದ್ದೇ ಬಿಡಿ. ಒಂದೊಮ್ಮೆ ನಮ್ಮ ಬ್ಯಾಂಕಿನಲ್ಲಿ ನಿವೃತ್ತಿ ಅಂಚಿನಲ್ಲಿ ನಿಂತ ಅಧಿಕಾರಿ ಅಳಸಿಂಗ ಅಯ್ಯಂಗಾರ್ ಹೊಸದಾಗಿ ಧರಿಸಿದ ಕೋಟು ಪ್ಯಾಂಟು ಚಳಿಗಾಲಕ್ಕೆ ಕೊಟ್ಟ ಸಮವಸ್ತ್ರದ ಬಟ್ಟೆ ಎಂದು ಗೆಳೆಯ ಪ್ರೇಂ ಬೆಟ್ಟುಕಟ್ಟಿದ್ದ. ಅವನು ಆ ಅಧಿಕಾರಿಯ ಹಿಂದೆ ಹೋಗಿ ಬೆನ್ನಿಗೆ ಜೋರಾಗಿ ಗುದ್ದಿ ''ಲೇ ಸಾಹೆಬರು ಕರಿತಾ ಇದ್ರೂ ಹಾಗೆ

ಹೋಗ್ತಾ ಇದ್ದೀಯಾ?'' ಎಂದ. ವ್ಯಕ್ತಿ ತಿರುಗಿದಾಗ ''ಸಾರಿ ಸಾರ್ ನಮ್ಮ ಡಿಪಾರ್ಟ್‌ಮೆಂಟಿನ ನರಸಿಂಹ ಅಂದ್ಕೊಂಡುಬಿಟ್ಟೆ'' ಎಂದ ಆಳಿಸಿಂಗ ಅಯ್ಯಂಗಾರ್‌ಗೆ ಪ್ರೇಂ ತುಂಟತನ ಹೊಸದೇನಲ್ಲ, ಬೇಕಂತನೆ ಮಾಡಿದ್ದಾನೆಂದು ಖಚಿತವಾಯಿತು. ಆದರೂ ರೇಗದೆ ಮೌನವಾಗಿದ್ದರು. ಅವರು ರೇಗದಿದ್ದರಿಂದ ಅವರು ಜವಾನನಿಂದ ಬಟ್ಟೆಯನ್ನು ರಿಯಾಯಿತಿ ದರದಲ್ಲಿ ಕೊಂಡೊ ಅಥವಾ ಅವನು ಅವನಿಗೆ ತೀರಿಸಬೇಕಾದ ಸಾಲದ ಬಾಬ್ತಿಗಾಗಿಯೊ ವಿಂಟರ್ ಯೂನಿಫಾರಂ ಬಟ್ಟೆ ತೆಗೆದುಕೊಂಡು ಸೂಟ್ ಹೊಲಿಸಿದ್ದಾರೆಂದು ಪ್ರೇಂ ಖಚಿತಪಡಿಸಿದ. ಗುಮಾನಿ ಗುಟ್ಟಾಗಿ ಉಳಿಯಲಿಲ್ಲ, ಪ್ರೇಂ ನರಸಿಂಹನನ್ನು ಕೆಣಕಿ ವಿಷಯವನ್ನು ಒಪ್ಪಿಕೊಳ್ಳುವಂತೆ ಮಾಡಿದ. ಒಟ್ಟಿನಲ್ಲಿ ಸಮವಸ್ತ್ರ ಯಾವ ಯಾವ ಉಪಯೋಗಕ್ಕೆ ಬರುತ್ತೆ ಎಂದು ಸ್ಪಷ್ಟವಾಯಿತು.

## ಮರೆತುಹೋದ ಮಾತು

ವಿಧಾನ ಸೌಧದಲ್ಲಿ ಶಾಸಕರಿಗೂ ಸಮವಸ್ತ್ರಕೊಟ್ಟರೆ ಅವರು ಜಗಳವಾಡಿದಾಗ, ಪ್ರತಿಭಟನೆ ಮಾಡಿದಾಗ ತಮ್ಮ ಶರಟನ್ನು ಹರಿದುಕೊಳ್ಳಬಹುದು. ಅದು ಸರ್ಕಾರಿ ಖರ್ಚಿನಲ್ಲೇ! ಈ ಸಲಹೆಯನ್ನು ಪಕ್ಷಾತೀತವಾಗಿ ಒಕ್ಕೊರಲಿಂದ ಶಾಸಕರು ಒಪ್ಪಿಯಾರು.

✵

## ಗಾಂಧಿಯ ಬವಣೆ

ಕಡಿಮೆ ಮಕ್ಕಳಿದ್ದವರಿಗೆ ಬಹುಮಾನ ಕೊಡಲು ದೇವರು ಒಂದು ಯೋಜನೆ ಹಾಕಿ ಭಾರತದವರ ಪರಿಸ್ಥಿತಿ ಅರಿಯಲು ಸ್ವರ್ಗದಲ್ಲಿ ಅಡ್ಡಾಡಿದ.

ಮೊದಲು ಸಿಕ್ಕಿದ್ದು ನೆಹರು. ಎಷ್ಟು ಮಕ್ಕಳು ಎಂದಾಗ ನೆಹರು 'ಒಂದೇ' ಎಂದರು.

'ಗುಡ್' ಎಂದ ದೇವರು ಅವರಿಗೆ ಭಾರಿ ಕಾರ್ ಬಹುಮಾನವಾಗಿ ನೀಡಿದ.

ನಂತರ ಇಂದಿರಾ ಗಾಂಧಿ ಸಿಕ್ಕಿದರು. ನನಗೆ ಇಬ್ಬರು ಮಕ್ಕಳು ಎಂದರು ಆಕೆ ವಿಚಾರಿಸಿದಾಗ. 'ನಾಟ್ ಬ್ಯಾಡ್' ಎಂದು ಅವರಿಗೂ ಒಂದು ದೊಡ್ಡ ಕಾರ್ ಬಹುಮಾನವಾಗಿ ನೀಡಿ ಮುಂದೆ ಹೊರಟ.

ನೆಹರು ಮತ್ತು ಇಂದಿರಾ ತಮ್ಮ ತಮ್ಮ ಕಾರುಗಳಲ್ಲಿ ಅಡ್ಡಾಡುತ್ತಿದ್ದರು. ಒಮ್ಮೆ ಅವರಿಗೆ ಮಹಾತ್ಮ ಗಾಂಧಿ ಸಿಕ್ಕಿದರು. ಅವರು ನಡದೇ ಹೊರಟಿದ್ದರು. 'ಅರೆ ಬಾಪು! ದೇವರು ನಿಮಗೇನು ಕೊಡಲಿಲ್ಲವೆ?' ಎಂದು ಕೇಳಿದರು.

''ದೇವರು ನನ್ನನ್ನು ವಿಚಾರಿಸಲು ಬರಲೇ ಇಲ್ಲ. ಏಕೆಂದರೆ ಯಾರೋ ಮೂರ್ಖರು ಅವನಿಗೆ ನಾನು ಭಾರತದ ಪಿತ ಎಂದು ಹೇಳಿದ್ದರು'' ಎಂದರು ಗಾಂಧಿ ಬೇಜಾರಿನಿಂದ.

## ಉತ್ತರಗಳು

1 ವರದಕ್ಷಿಣೆ ಬದಲಾಗಿ ವರನ ತಂದೆ ಒಂದು ಮೂಟೆ ಈರುಳ್ಳಿ ಕೇಳಿದ್ದರಿಂದ

2 ಮೂಟೆಯಲ್ಲಿ ಚಿನ್ನ ಬೆಳ್ಳಿ ಬದಲಾಗಿ ಐವತ್ತು ಕೆ.ಜಿ. ಈರುಳ್ಳಿ ಇತ್ತು

3 ಅವನು ಕೇಳಿದ ಈರುಳ್ಳಿ ದೋಸೆ ಮಾಡಿಕೊಡಲಿಲ್ಲ ಅಂತ

4 ತಮ್ಮ ಜಮೀನಿನಲ್ಲಿ ಬೆಳೆದಿದ್ದ ಈರುಳ್ಳಿಯನ್ನು ಮೇಷ್ಟ್ರಿಗೆ ಅರ್ಪಿಸಿದ್ದರಿಂದ

5 ಎಣ್ಣೆ ವ್ಯಾಪಾರ ಬಿಟ್ಟು ಈರುಳ್ಳಿ ವ್ಯಾಪಾರ ಹಿಡಿದಿದ್ದರಿಂದ

6 ಬಾಡಿಗೆ ಮನೆಯವರು ಪದೇ ಪದೇ ಈರುಳ್ಳಿ ಹುಳಿ ಮಾಡ್ಕೊಂಡು ತಿನ್ನೋಕೆ ಷುರು ಮಾಡಿದ್ರಿಂದ

7 ಈರುಳ್ಳಿ ವ್ಯಾಪಾರಿ ಸಿಗಲಿ ಅಂತ ಬೇರೆಯವರನ್ನು ತಿರಸ್ಕರಿಸುತ್ತಿದ್ದಳು

8 ಡ್ರೈವರು ಹೊಲದಲ್ಲಿ ಬಿದ್ದಿದ್ದ ಈರುಳ್ಳಿಯನ್ನು ಆಯ್ದುಕೊಳ್ಳಲು ಬಸ್ಸನ್ನು ಬಿಟ್ಟು ಓಡಿದ್ದರಿಂದ

9 ಅತ್ತೆ ತನಗೆ ಅಂತ ತಂದುಕೊಂಡಿದ್ದ ಈರುಳ್ಳಿಯನ್ನು ಸೊಸೆ ತಾಯಿ ಮನೆಗೆ ಕಳಿಸಿದ್ದರಿಂದ

10 ಅವನು ಆಗಸದಲ್ಲಿ ಇರೋ ಚಂದ್ರನನ್ನು ಬೇಕಾದರೂ ತಂದುಕೊಡ್ತಿನಿ ಆದರೆ ಈರುಳ್ಳಿ ದೋಸೆ ಮಾತ್ರ ಕೇಳಬೇಡ ಅಂದಿದ್ದರಿಂದ

11 ಅವನು ಎಲ್ಲ ನೌಕರರಿಗೂ ಈರುಳ್ಳಿ ಸಾಂಬಾರ್ ಮಾಡಿದ್ದರಿಂದ

12 ಐದೈದು ಕೆ.ಜಿ. ಈರುಳ್ಳಿ ಕೊಟ್ಟು ಪ್ರಶ್ನೆ ಪತ್ರಿಕೆನ ಪರೀಕ್ಷೆಗೆ ಮೊದಲೇ ಗಿಟ್ಟಿಸಿಕೊಂಡಿದ್ದರು

13 ಮಂತ್ರಿಗಳ ಮನೆಗೆ ಒಂದು ಮೂಟೆ ಈರುಳ್ಳಿ ಕಳಿಸಿಕೊಟ್ಟು

14 ಹಣದ ಬದಲಾಗಿ ಈರುಳ್ಳಿ ಕೇಳ್ತಿರೋದರಿಂದ